# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು–572 103

ಸಂಖ್ಯೆ :ತುವಿ:ವಿ.ವಿ.ಪ/ಸಿಂ.ವಿ/2023–24/950 ದಿನಾಂಕ: 29.05.2024

ಇವರಿಗೆ,

**ಮಾನ್ಯ ಸಿಂಡಿಕೇಟ್‌ನ ಎಲ್ಲಾ ಸದಸ್ಯರುಗಳಿಗೆ**
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯರೆ,

**ವಿಷಯ: 2023–24ನೇ ಸಾಲಿನ ಐದನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳನ್ನು ಕಳುಹಿಸುತ್ತಿರುವ ಕುರಿತು.**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಐದನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ:07.06.2024ರ ಶುಕ್ರವಾರ ಸಮಯ ಬೆಳಿಗ್ಗೆ 10:00 ಗಂಟೆಗೆ ಮಾನ್ಯ ಕುಲಪತಿಯವರ ಕೊಠಡಿ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ, ತುಮಕೂರು–572103 ಇಲ್ಲಿ** ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಲಿರುವ ಕಾರ್ಯಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಅಡಕ:** ಐದನೇ ಸಾಮಾನ್ಯ ಸಿಂಡಿಕೇಟ್ ಪರಿಷತ್ ಸಭೆಯ ಕಾರ್ಯಸೂಚಿಗಳು

**ಪ್ರತಿಗಳು:**

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ, ತುಮಕೂರು– 572 103

**ಸಭಾ ಸಂಖ್ಯೆ: ಸಾ.ಸಿಂ–05 ದಿನಾಂಕ: 07.06.2024 (ಶುಕ್ರವಾರ) ಸಮಯ: ಬೆಳಿಗ್ಗೆ:10:00**

**2023–24ನೇ ಸಾಲಿನ ಐದನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳು**

| ಕ್ರ.ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| **ದಿನಾಂಕ 21.02.2024ರಂದು ನಡೆದ ನಾಲ್ಕನೇ ಸಾಮಾನ್ಯ ಸಿಂಡಿಕೇಟ್ ಮತ್ತು ದಿನಾಂಕ: 13.03.2024 ರಂದು ನಡೆದ ನಾಲ್ಕನೇ ವಿಶೇಷ ಸಿಂಡಿಕೇಟ್ ಸಭಾ ನಡಾವಳಿಗಳ ದೃಢೀಕರಣ** | | | |
| **ಪರೀಕ್ಷಾ ವಿಭಾಗ** | | | |
| 1. | 2023–24.ಸಾ.ಸಿಂ–05 ಪ.ವಿ.–01 | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು. | 1 |
| 2. | 2023–24.ಸಾ.ಸಿಂ–05 ಪ.ವಿ.–02 | 2024ರ ಫೆಬ್ರವರಿ / ಮಾರ್ಚ್ / ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆ ಮೊತ್ತ ಪಾವತಿಸುವ ಕುರಿತು. | 2 |
| **ಪಿಹೆಚ್.ಡಿ ವಿಭಾಗ** | | | |
| 3. | 2023–24.ಸಾ.ಸಿಂ–05 ಪಿಹೆಚ್.ಡಿ–01 | 2015–16ನೇ ಸಾಲಿನ ಸಂಶೋಧನಾರ್ಥಿಯಾದ ರುದ್ರಪ್ಪ ಅಲ್ಲಪ್ಪ ಅರಳಿಮಟ್ಟಿ (ನೊಂ.ದಿ. 15ES014)ರವರ ಪಿಹೆಚ್.ಡಿ ನೊಂದಣಿ ರದ್ದತಿಯನ್ನು ಹಿಂಪಡೆದು ಅವಧಿ ವಿಸ್ತರಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸುವ ಕುರಿತು. | 3 |
| 4. | 2023–24.ಸಾ.ಸಿಂ–05 ಪಿಹೆಚ್.ಡಿ–02 | 2015–16ನೇ ಸಾಲಿನ ಸಂಶೋಧನಾರ್ಥಿಯಾದ ಶ್ರೀ ರಾಮಕೃಷ್ಣ ವಿ (ನೊಂ.ದಿ. 15PS005)ರವರ ಪಿಹೆಚ್.ಡಿ ಸಂಶೋಧನೆಯ ಹೆಚ್ಚುವರಿ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸುವ ಕುರಿತು. | 4 |
| **ಪರೀಕ್ಷಾ ವಿಭಾಗ** | | | |
| 5. | 2023–24.ಸಾ.ಸಿಂ–05 ಪ.ವಿ.–03 | ತುಮಕೂರು ವಿಶ್ವವಿದ್ಯಾನಿಲಯದ ಹದಿನೇಳನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಕುರಿತು. | 5 |
| 6. | 2023–24.ಸಾ.ಸಿಂ–05 ಪ.ವಿ.–04 | ತುಮಕೂರು ವಿಶ್ವವಿದ್ಯಾನಿಲಯದ 17ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಖರ್ಚುವೆಚ್ಚಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು. | 6 |
| 7. | 2023–24.ಸಾ.ಸಿಂ–05 ಪ.ವಿ.–05 | ವಿವಿಧ ಸ್ನಾತಕ / ಸ್ನಾತಕೋತ್ತರ ಪದವಿ ಪರೀಕ್ಷೆಗಳ ಮೌಲ್ಯಮಾಪನ ಪಿಹೆಚ್.ಡಿ / BOE ಮತ್ತು BOAE ನಲ್ಲಿ ಕಾರ್ಯನಿರ್ವಹಿಸುವ ಅಧ್ಯಾಪಕರಿಗೆ ಸಂಭಾವನೆ ನೀಡುವ ಕುರಿತು. | 7 |
| **ಕಾಲೇಜು ಅಭಿವೃದ್ಧಿ ಪರಿಷತ್ತು** | | | |
| 8. | 2023–24.ಸಾ.ಸಿಂ–05 ಕಾ.ಅ.ಪ–01 | 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಸ್ವೀಕೃತವಾದ ಪ್ರಸ್ತಾವನೆಗಳ ಕುರಿತು. | 8 |
| **ಇಂಜಿನಿಯರಿಂಗ್ ವಿಭಾಗ** | | | |
| 9. | 2023–24.ಸಾ.ಸಿಂ–05 ಇಂ.ವಿ.01 | ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನ ಮೊದಲ ಹಂತದ ಕಾಮಗಾರಿಯ ಕರಾರು ಅವಧಿ ನವೀಕರಣ ಕುರಿತು. | 9 |
| 10. | 2023–24.ಸಾ.ಸಿಂ–05 ಇಂ.ವಿ–02 | ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ವಿವಿಧ ಹಾಸ್ಟೆಲ್ ಕಟ್ಟಡ ಮತ್ತು ಮುಖ್ಯದ್ವಾರ ನಿರ್ಮಾಣ ಕಾಮಗಾರಿಗಳ ಕರಾರು ಅವಧಿ ನವೀಕರಣ ಕುರಿತು. | 10 |
| 11. | 2023–24.ಸಾ.ಸಿಂ–05 ಇಂ.ವಿ–03 | ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಪ್ರಯೋಗಾಲಯ ಕಟ್ಟಡಕ್ಕೆ ಎರಡನೇ ಮಹಡಿಯನ್ನು ನಿರ್ಮಿಸುವ ಕುರಿತು. | 11 |
| 12. | 2023–24.ಸಾ.ಸಿಂ–05 ಇಂ.ವಿ–04 | ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ನಿರ್ಮಾಣವಾಗುತ್ತಿರುವ ಶೈಕ್ಷಣಿಕ ಭವನ–1ಕ್ಕೆ ಲಿಫ್ಟ್ ವ್ಯವಸ್ಥೆಯನ್ನು ಕಲ್ಪಿಸುವ ಕುರಿತು. | 12 |

(ಪು.ತಿ.ನೋ)

| | | | |
|---|---|---|---|
| 13. | 2023–24.ಸಾ.ಸಿಂ–05 ಇಂ.ವಿ–05 | ತುಮಕೂರು ವಿಶ್ವವಿದ್ಯಾನಿಲಯದ ತಿಪಟೂರು ಸ್ನಾತಕೋತ್ತರ ಕೇಂದ್ರ ಕಲ್ಪಸಿರಿಯಲ್ಲಿ ಮುಖ್ಯದ್ವಾರ, ಭದ್ರತಾ ಕೊಠಡಿ ಹಾಗೂ ಇನ್ನಿತರೆ ಕಾಮಗಾರಿಯ ವರ್ಕ್‌ಸ್ಲಿಪ್ ಅನುಮೋದನೆ ಕುರಿತು. | 13 |
| 14. | 2023–24.ಸಾ.ಸಿಂ–05 ಇಂ.ವಿ–06 | ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಯ ವರ್ಕ್‌ಸ್ಲಿಪ್ ಮತ್ತು E.I.R.L ಅನುಮೋದನೆ ಕುರಿತು. | 14 |
| | | **ಶೈಕ್ಷಣಿಕ ವಿಭಾಗ** | |
| 15. | 2023–24.ಸಾ.ಸಿಂ–05 ಶೈ.ವಿ–01 | ತುಮಕೂರು ವಿಶ್ವವಿದ್ಯಾನಿಲಯ ಹಾಗೂ JD Institute of Fashion Technology, Bangalore ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು. | 15 |
| | | **ಕ್ರೀಡಾ ವಿಭಾಗ** | |
| 16. | 2023–24.ಸಾ.ಸಿಂ–05 ಶೈ.ವಿ–01 | ದಿನಾಂಕ 17.05.2024ರಂದು ನಡೆದ ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ 2024–25ನೇ ಶೈಕ್ಷಣಿಕ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. | 16 |
| | | **ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ** | |
| 17. | 2023–24.ಸಾ.ಸಿಂ–05 ಸಿ.ವಿ–01 | ವಿಶ್ವವಿದ್ಯಾನಿಲಯದ ಆಡಳಿತ ಕಚೇರಿ / ಸ್ನಾತಕೋತ್ತರ ಅಧ್ಯಯನ ವಿಭಾಗ / ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಸಂಚಿತವೇತನ ನೌಕರರ ಸೇವೆಯನ್ನು ಮುಂದುವರೆಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು. | 17 |
| 18. | 2023–24.ಸಾ.ಸಿಂ–05 ಸಿ.ವಿ–01 | ಡಾ. ಮುಕುಂದಪ್ಪ ಬಿ.ಎಲ್., ಸಹ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಹಾಗೂ ವಯೋನಿವೃತ್ತಿ ಗಳಿಕೆ ರಜೆ ನಗದೀಕರಣ ಸೌಲಭ್ಯ ಮಂಜೂರು ಮಾಡಿರುವ ಆದೇಶಗಳ ಸ್ಥಿರೀಕರಣದ ಕುರಿತು. | 18 |

| ವಿಷಯ: ಸಂಖ್ಯೆ: | 2023–24:.ಸಾ.ಸಿಂ:05 ಪ.ವಿ.01..:ದಿ:07.062024 |
|---|---|

ವಿಷಯ: ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು.

* * * * * * *

ತುಮಕೂರು ವಿಶ್ವವಿದ್ಯಾನಿಲಯದ 2024 ರ ಜನವರಿ/ಫೆಬ್ರವರಿ/ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ, ಸ್ನಾತಕ ಶಿಕ್ಷಣ, ವಿವಿಧ ಸ್ನಾತಕೋತ್ತರ ಪದವಿಗಳ ಹಾಗೂ ಪಿಎಚ್ ಡಿ ಪ್ರವೇಶಾತಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯವು ನಂಬಿಗಸ್ಥ ಸಂಸ್ಥೆಯೊಂದಿಗೆ ದಿನಾಂಕ:13.07.2022 ರಿಂದ ದಿನಾಂಕ:12.07.2024 ರವರೆಗೆ ಅನ್ವಯವಾಗುವಂತೆ ಸಿಂಡಿಕೇಟ್ ಸಭಾ ನಿರ್ಣಯದಂತೆ ಒಂದು ವರ್ಷದ ಅವಧಿಗೆ ಕರಾರು ಒಪ್ಪಂದ ಮಾಡಿಕೊಂಡಿದ್ದು, ಅದರಂತೆ ವಿವಿಧ ಪದವಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ಕಾರ್ಯವನ್ನು ನಿರ್ವಹಿಸಲಾಗಿರುತ್ತದೆ. ಸದರಿ ಸಂಸ್ಥೆಯವರು ಮುದ್ರಣ ಕಾರ್ಯದ ಹುಂಡಿಯನ್ನು ಪಾವತಿಸುವಂತೆ ಕೋರಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ.ಸಂ | ವಿವರಗಳು | ಮೊತ್ತ(ರೂ.ಗಳಲ್ಲಿ) |
|---|---|---|
| 1. | 2024 ರ ಜನವರಿ/ಫೆಬ್ರವರಿ/ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ಸ್ನಾತಕ ಶಿಕ್ಷಣ ಮತ್ತು ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ವೆಚ್ಚ | 35,33,197.00 |
| 2. | 2024 ರ ಏಪ್ರಿಲ್ ಮಾಹೆಯಲ್ಲಿ ನಡೆದ ವಿವಿಧ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ವೆಚ್ಚ | 5,03,198.00 |
| 3. | 2024 ರ ಏಪ್ರಿಲ್ ಮಾಹೆಯಲ್ಲಿ ನಡೆದ ಪಿಎಚ್ ಡಿ ಪ್ರವೇಶಾತಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ವೆಚ್ಚ | 2,08,850.00 |
| ಒಟ್ಟು ಮೊತ್ತ(ರೂಪಾಯಿ ನಲವತ್ತೇರಡು ಲಕ್ಷದ ನಲವತ್ತೈದು ಸಾವಿರದ ಎರಡುನೂರ ನಲವತ್ತೈದು ಮಾತ್ರ) | | 42,45,245.00 |

ಸದರಿ ಹುಂಡಿಯ ಮೊತ್ತ ರೂ.42,45,245.00 (ರೂಪಾಯಿ ನಲವತ್ತೇರಡು ಲಕ್ಷದ ನಲವತ್ತೈದು ಸಾವಿರದ ಎರಡುನೂರ ನಲವತ್ತೈದು ಮಾತ್ರ)ಗಳನ್ನು ಮಾನ್ಯ ಕುಲಪತಿಗಳ ಅನುಮೋದನೆಯಂತೆ ಸಂಬಂಧಿಸಿದ ಸಂಸ್ಥೆಗೆ ಕರಾರು ಒಪ್ಪಂದ ಪ್ರಕಾರ ಪಾವತಿಸಲಾಗಿದ್ದು, ಸದರಿ ವಿಷಯವನ್ನು **ದಿನಾಂಕ:07.06.2024 ರಂದು ನಡೆಯುವ ಐದನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಮುಂದೆ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.**

| ವಿಷಯ ಸಂಖ್ಯೆ | 2023-24: ಸಾ.ಸಿಂ.: 05 ಪ.ವಿ.:02.:ದಿ:07.06.2024 |
|---|---|

ವಿಷಯ : 2024 ರ ಫೆಬ್ರವರಿ/ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆಯ ಮೊತ್ತ ಪಾವತಿಸುವ ಕುರಿತು.

******

ವಿಶ್ವವಿದ್ಯಾನಿಲಯದ ಶೈಕ್ಷಣಿಕ/ಪರೀಕ್ಷಾ/ಇತರೆ ಕಾರ್ಯಗಳಿಗಾಗಿ ವಿವಿಧ ಮಾದರಿಯ ವಾಹನಗಳನ್ನು ಬಾಡಿಗೆ ಪಡೆಯುವ ಸಲುವಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿ (ಟೆಂಡರ್ ಅಧಿಸೂಚನೆ ಸಂಖ್ಯೆ:TU/G&D/Ex.V/2022-23/3017 Pc/CALL-3 Dated:09.02.2023) ಟೆಂಡರ್‌ನಲ್ಲಿ ಯಶಸ್ವಿಯಾದ ಮೆ॥ ಆನಂದ್ ಟೂರ್ಸ್ ಅಂಡ್ ಟ್ರಾವೆಲ್ಸ್, ಎಂ.ಜಿ.ರೋಡ್, ತುಮಕೂರು ಇವರೊಂದಿಗೆ ದಿನಾಂಕ:27.03.2023 ರಿಂದ ದಿನಾಂಕ:26.03.2024ಕ್ಕೆ ಒಂದು ವರ್ಷದ ಅವಧಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು.

ಸದರಿ ಟೆಂಡರ್‌ನ ಮೌಲ್ಯ ರೂ.15 ಲಕ್ಷ ಮುಕ್ತಾಯವಾದ ಕಾರಣ ಕೆ.ಟಿ.ಪಿ.ಪಿ ನಿಯಮಾಳಿಯನ್ವಯ ಶೇಕಡಾ 25 ರಷ್ಟು ಹೆಚ್ಚಿಸಿ ಪರೀಕ್ಷಾ ಕಾರ್ಯಗಳಿಗಾಗಿ ಬಾಡಿಗೆಗೆ ಪಡೆದ ವಾಹನಗಳ ಒಟ್ಟು ಮೊತ್ತ 17,34,697/-(ರೂ. ಹದಿನ್ನೇಳು ಲಕ್ಷ ಮೂವತ್ತ ನಾಲ್ಕ ಸಾವಿರದ ಆರುನೂರ ತೊಂಭತ್ತೇಳು ಮಾತ್ರ)ಗಳನ್ನು ಈಗಾಗಲೇ ಸದರಿ ಸಂಸ್ಥೆಯವರಿಗೆ ಪಾವತಿಸಲಾಗಿದೆ.

ಟೆಂಡರ್‌ನ ಮೌಲ್ಯಮುಕ್ತಾಯವಾಗಿರುವದರಿಂದ ಮತ್ತು ಪರೀಕ್ಷಾ/ ಇತರೆ ಕಾರ್ಯಗಳಿಗಾಗಿ ವಿವಿಧ ಮಾದರಿಯ ಬಾಡಿಗೆ ವಾಹನಗಳು ತುರ್ತು ಅವಶ್ಯವಿರುವುದರಿಂದ ದಿನಾಂಕ:01.11.2023, 19.11.2023 ಹಾಗೂ 02.12.2023 ಮೂರು ಭಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಮೂರು ಭಾರಿ ಏಕೈಕ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿರುವುದರಿಂದ ಪುನಃ ನಾಲ್ಕನೇ ಭಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಮೂರು ಸಂಸ್ಥೆಗಳು ಭಾಗವಹಿಸಿದ್ದು ಎಲ್-1 ಸಂಸ್ಥೆಯವರು ಕಾರಣಾಂತರದಿಂದ ಬಾಡಿಗೆ ವಾಹನಗಳನ್ನು ಒದಗಿಸಲು ಸಾಧ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ದಿನಾಂಕ:12.02.2024 ರಿಂದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳು ಪ್ರಾರಂಭವಾದ ಹಿನ್ನೆಯಲ್ಲಿ ಪರೀಕ್ಷಾ ಕಾರ್ಯಗಳಿಗಾಗಿ ವಿವಿಧ ಮಾದರಿಯ ಬಾಡಿಗೆ ವಾಹನಗಳು ಅತೀ ತುರ್ತಾಗಿ ಬೇಕಾಗಿರುವುದಿಂದ ಹಾಗೂ ಸಾರ್ವತ್ರಿಕ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿ ಇದರಿಂದ ಈ ಹಿಂದಿನ ದರಗಳಂತೆ ದಿನಾಂಕ:12.02.2024 ರಿಂದ ದಿನಾಂಕ:15.04.2024 ರವರೆಗೆ ಪ್ರಶ್ನೆ ಪತ್ರಿಕೆಗಳನ್ನು ವಿವಿಧ ಪರೀಕ್ಷಾ ಕೇಂದ್ರಗಳಿಗೆ ವಿತರಿಸಲು, ಉತ್ತರ ಪುಸ್ತಕಗಳನ್ನು ವಿವಿಧ ಪರೀಕ್ಷಾ ಕೇಂದ್ರಗಳಿಂದ ವಿಶ್ವವಿದ್ಯಾನಿಲಯಕ್ಕೆ ತರಲು ಹಾಗೂ ಜಾಗೃತದಳದ ಕಾರ್ಯಗಳಿಗಾಗಿ ಸದರಿ ಕರಾರು ಒಪ್ಪಂದದನ್ವಯ ಮೆ.ಆನಂದ್ ಟೂರ್ಸ್ ಅಂಡ್ ಟ್ರಾವೆಲ್ಸ್, ತುಮಕೂರು ಇವರಿಂದ ವಿವಿಧ ಮಾದರಿಯ ವಾಹನಗಳನ್ನು ಬಾಡಿಗೆಗೆ ಪಡೆಯಲಾಗಿರುತ್ತದೆ.

ಈ ತತ್ಸಂಬಂಧ ಬಾಡಿಗೆಯ ಮೊತ್ತ ಪಾವತಿಸುವಂತೆ ಕೋರಿ ಮೆ.ಆನಂದ್ ಟೂರ್ಸ್ ಅಂಡ್ ಟ್ರಾವೆಲ್ಸ್, ತುಮಕೂರು ಹುಂಡಿಯನ್ನು ಸಲ್ಲಿಸಿರುತ್ತಾರೆ. ಸದರಿ ಹುಂಡಿಯ ಮೊತ್ತ ರೂ. 10,55,964/–(6,88,436+3,67,528) **(ರೂಪಾಯಿ ಹತ್ತು ಲಕ್ಷದ ಐವತ್ತೈದು ಸಾವಿರದ ಒಂಭತ್ತು ನೂರ ಅರವತ್ನಾಲ್ಕು ಮಾತ್ರ)**ಗಳನ್ನು ಮಾನ್ಯ ಕುಲಪತಿಗಳ ಅನುಮೋದನೆಯಂತೆ ಸಂಬಂಧಿಸಿದ ಸಂಸ್ಥೆಗೆ ಈಗಾಗಲೇ ಹಣ ಪಾವತಿಸಲಾಗಿದ್ದು, ಸದರಿ ವಿಷಯವನ್ನು **ದಿನಾಂಕ:07.06.2024 ರಂದು ನಡೆಯುವ ಐದನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಮುಂದೆ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.**

| ವಿಷಯ ಸಂಖ್ಯೆ: | 2023-24:ಸಾ.ಸಿಂ.05- ಪಿಹೆಚ್.ಡಿ-01 ದಿನಾಂಕ: 07.06.2024 |
|---|---|

**ವಿಷಯ:** 2015-16 ನೇ ಸಾಲಿನ ಸಂಶೋಧನಾರ್ಥಿಯಾದ **ರುದ್ರಪ್ಪ ಅಲ್ಲಪ್ಪ ಅರಳಿಮಟ್ಟಿ (ನೊಂ.ದಿ. 15ES014)** ರವರ ಪಿಹೆಚ್.ಡಿ ನೊಂದಣಿ ರದ್ದತಿಯನ್ನು ಹಿಂಪಡೆದು ಅವಧಿ ವಿಸ್ತರಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸುವ ಕುರಿತು.

**ಉಲ್ಲೇಖ:**
1. ರುದ್ರಪ್ಪ ಅಲ್ಲಪ್ಪ ಅರಳಿಮಟ್ಟಿ ರವರ ಮನವಿ ಪತ್ರಗಳ ದಿನಾಂಕ:15.12.2023 & 18.01.2024.
2. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ತು.ವಿ.ಪಿಹೆಚ್.ಡಿ/2023-24/914 ದಿನಾಂಕ:29.12.2023.
3. ವಿವಿ ಪರಿಷ್ಕೃತ ಕಚೇರಿ ಆದೇಶ ಸಂಖ್ಯೆ:ತುವಿತು/ಪಿಹೆಚ್.ಡಿ./2023-24/1016 ದಿನಾಂಕ: 09.02.2024.
4. ಅಧ್ಯಕ್ಷರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿ, ತು.ವಿ.ತು ಇವರ ಪತ್ರ ದಿನಾಂಕ: 20.02.2024.

****

ಮೇಲ್ಕಂಡ ವಿಷಯ & ಉಲ್ಲೇಖಕ್ಕೆ ಸಂಬಂಧಿಸಿದಂತೆ, **ಶ್ರೀ. ರುದ್ರಪ್ಪ ಅಲ್ಲಪ್ಪ ಅರಳಿಮಟ್ಟಿ (ನೊಂ.ದಿನಾಂಕ:15ES014)** ರವರು 2015-16 ನೇ ಸಾಲಿನಲ್ಲಿ **ಪ್ರೊ. ವಿಲಾಸ್ ಎಂ ಕಾದ್ರೋಳಕರ್,** ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಮಾರ್ಗದರ್ಶನದಡಿಯಲ್ಲಿ ಪಿಹೆಚ್.ಡಿ ಸಂಶೋಧನೆಯನ್ನು ಕೈಗೊಂಡಿದ್ದು. ಸದರಿ ಸಂಬಂಧ ಪಿಹೆಚ್.ಡಿ ಸಂಶೋಧನೆಯನ್ನು ಮುಂದುವರಿಸಲು ಕಾಲಾವಕಾಶ ನೀಡುವಂತೆ (ಉಲ್ಲೇಖ 01) ರಲ್ಲಿ ಮನವಿ ಸಲ್ಲಿಸಿದ್ದು, ಸದರಿ ಸಂಬಂಧ ಪರಿಶೀಲಿಸಲಾಗಿ, **ಪಿಹೆಚ್.ಡಿ 2012 ವಿನಿಯಮ ಸೆಕ್ಷನ್ 21.3 ರ ಪ್ರಕಾರ ಹಾಗೂ ಸದರಿ ಸಂಶೋಧನಾರ್ಥಿಯ ಪಿಹೆಚ್.ಡಿ ಸಂಶೋಧನೆಯ ಏಳು ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಸಂಶೋಧನೆಯ ಅವಧಿಯನ್ನು ಈ ಹಂತದಲ್ಲಿ ವಿಸ್ತರಿಸಲು ಅವಕಾಶವಿರುವುದಿಲ್ಲವಾದ್ದರಿಂದ (ಉಲ್ಲೇಖ 02) ರ ಕಚೇರಿ ಪತ್ರದಲ್ಲಿ ಸಂಶೋಧನಾ ನೊಂದಣಿಯನ್ನು ರದ್ದುಪಡಿಸಿ ಆದೇಶಿಸಲಾಗಿರುತ್ತದೆ.**

ಮುಂದುವರೆದು, ಸದರಿ ಸಂಶೋಧನಾರ್ಥಿಯು ದಿನಾಂಕ: 18.01.2024 ರ ಪತ್ರದಲ್ಲಿ ಪಿಹೆಚ್.ಡಿ ನೊಂದಣಿ ರದ್ದತಿಯನ್ನು ಹಿಂಪಡೆದು ಅವಧಿ ವಿಸ್ತರಿಸಿ ಪಿಹೆಚ್.ಡಿ ಮಹಾಪ್ರಬಂಧವನ್ನು ಸಲ್ಲಿಸಲು ಅನುಮತಿ ನೀಡಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಸದರಿ ಸಂಬಂಧ **ಸದರಿ ಮಾರ್ಗದರ್ಶಕರು ಸದರಿಯವರ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ, ತಮ್ಮ ಅಭಿಪ್ರಾಯವನ್ನು ಡಾಕ್ಟರಲ್ ಕಮಿಟಿ ಅಧ್ಯಕ್ಷರಾದ ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿ, ತು.ವಿ.ತು. ಇವರಿಗೆ ಸಲ್ಲಿಸಲು ತಿಳಿಸಲಾಗಿತ್ತು ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿ, ತು.ವಿ.ತು ರವರು 2012 ರ ಪ್ರಕರಣ 13 (13.1) ರನ್ವಯ ಡಾಕ್ಟರಲ್ ಕಮಿಟಿ ಸಭೆಯನ್ನು ಆಯೋಜಿಸಿ,** ಸದರಿ ಮಾರ್ಗದರ್ಶಕರ ಅಭಿಪ್ರಾಯವನ್ನು ನಿಯಮಾನುಸಾರ ಪರಿಶೀಲಿಸಿ, ಶ್ರೀ. ರುದ್ರಪ್ಪ ಅಲ್ಲಪ್ಪ ಅರಳಿಮಟ್ಟಿ ರವರ ಪಿಹೆಚ್.ಡಿ ನೊಂದಣಿಯನ್ನು ರದ್ದುಪಡಿಸುವ ಅಥವಾ ರದ್ದತಿಯನ್ನು ಹಿಂಪಡೆದು ಅವಧಿ ವಿಸ್ತರಿಸುವ ಬಗ್ಗೆ ಸೂಕ್ತ ಶಿಫಾರಸ್ಸನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ (ಉಲ್ಲೇಖ 03) ರಲ್ಲಿ ತಿಳಿಸಲಾಗಿತ್ತು.

**ಪು.ತಿ.ನೋ**

ಅದರಂತೆ, ಉಲ್ಲೇಖ (04) ರಲ್ಲಿ ಅಧ್ಯಕ್ಷರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿ, ತು.ವಿ.ತು **ಹಾಗೂ ಮಾರ್ಗದರ್ಶಕರು ಸದರಿಯವರ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಈ ಕೆಳಗಿನಂತೆ ಶಿಫಾರಸ್ಸು ನೀಡಿರುತ್ತಾರೆ.**

**ರುದ್ರಪ್ಪ ಅಲ್ಲಪ್ಪ ಅರಳಿಮಟ್ಟಿ (ನೊಂ.ದಿ. 15ES014)** ಸಂಶೋಧನಾರ್ಥಿ, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು. ರವರು ಪಿಹೆಚ್.ಡಿ ಸಂಶೋಧನೆಯ ವಿಳಂಬಕ್ಕೆ ಸಂಶೋಧನಾರ್ಥಿ ನೀಡಿರುವ ಕಾರಣಗಳು – ಖಾಯಂ ನೌಕರಿ ಇಲ್ಲದೆ ಆರ್ಥಿಕ ಪರಿಸ್ಥಿತಿ ಅಷ್ಟಕ್ಕಷ್ಟೇ ಇದ್ದು, ಮಕ್ಕಳ ಅನಾರೋಗ್ಯ ಹಾಗೂ ಕೊರೋನ ಕಾಲದಲ್ಲಿ ಒಂದೂವರೆ ವರ್ಷ ಕೆಲಸವಿಲ್ಲವೆಂದು ತಿಳಿಸಿರುತ್ತಾರೆ. ಈ ಕಾರಣಗಳನ್ನು ಪರಿಗಣಿಸಿ ಹಾಗೂ ಪ್ರಸ್ತುತ ಸಂಶೋಧನೆಯ ಪ್ರಗತಿಯನ್ನು ಗಮನದಲ್ಲಿಟ್ಟು ಪಿಹೆಚ್.ಡಿ ಸಂಶೋಧನೆಯ 05 ವರ್ಷದ ವಾರ್ಷಿಕ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿರುತ್ತಾರೆ. 2 ವರ್ಷದ ಶುಲ್ಕವು ಬಾಕಿಯಿರುತ್ತದೆ. 12 ಅರ್ಧವಾರ್ಷಿಕ ಪ್ರಗತಿ ವರದಿಗಳು ತೃಪ್ತಿಕರವಾಗಿದ್ದು 13 ನೇ ಅರ್ಧವಾರ್ಷಿಕ ಪ್ರಗತಿ ವರದಿಯನ್ನು ವಿಭಾಗಕ್ಕೆ ಸಲ್ಲಿಸಿರುತ್ತಾರೆ. 2 ಯು.ಜಿ.ಸಿ ಕೇರ್ ಲಿಸ್ಟ್ ನಲ್ಲಿ ಪ್ರಕಟಣೆಯನ್ನು ಮಾಡಿರುತ್ತಾರೆ ಹಾಗೂ ಪ್ರಸ್ತುತ 14 ನೇ ಅರ್ಧವಾರ್ಷಿಕ ಪ್ರಗತಿ ವರದಿ, ಅಂಶೀಯ ವರದಿ, ಅಂತಿಮ ಸಾರಲೇಖ ಹಾಗೂ ಮಹಾಪ್ರಬಂಧದ ಕರಡು ಪ್ರತಿಯನ್ನು ಸಿದ್ದಪಡಿಸಿರುತ್ತಾರೆ. ಸದರಿ ಕಾರಣ ಹಾಗೂ ಪ್ರಗತಿಯನ್ನು ಮನಗಂಡು ಸಂಶೋಧನಾರ್ಥಿಗೆ ಮಾನವೀಯ ದೃಷ್ಟಿಯಿಂದ ವಿಶ್ವವಿದ್ಯಾನಿಲಯದ ನಿಯಮಾನುಸಾರ ಸಾಧಾರಣ ದಂಡವನ್ನು ವಿಧಿಸಿ, 06 ತಿಂಗಳ ಕಾಲಾವಧಿಯನ್ನು ಅಂತಿಮವಾಗಿ ವಿಸ್ತರಿಸಲು ಮಾರ್ಗದರ್ಶಕರು ಮನವಿ ಮಾಡಿಕೊಂಡಿರುತ್ತಾರೆ.

ಮುಂದುವರೆದು, ದಿನಾಂಕ: 20.02.2024 ರಲ್ಲಿ ನಡೆದ ಡಾಕ್ಟರಲ್ ಕಮಿಟಿಯಲ್ಲಿ ಸದರಿ ಸಂಶೋಧನಾರ್ಥಿಯ ಮನವಿ ಹಾಗೂ ಮಾರ್ಗದರ್ಶಕರ ಮನವಿಯನ್ನು ಪರಿಗಣಿಸಿ ಡಾಕ್ಟರಲ್ ಕಮಿಟಿಯು **ರುದ್ರಪ್ಪ ಅಲ್ಲಪ್ಪ ಅರಳಿಮಟ್ಟಿ (ನೊಂ.ದಿ. 15ES014) ರವರಿಗೆ ಮಾನವೀಯ ಹಿತದೃಷ್ಟಿಯಿಂದ ವಿದ್ಯಾನಿಲಯದ ನಿಯಮಾನುಸಾರ ಸಾಧಾರಣ ದಂಡಶುಲ್ಕವನ್ನು ವಿಧಿಸಿ, ಆರು ತಿಂಗಳ ಕಾಲಾವಧಿಯನ್ನು ಅಂತಿಮವಾಗಿ ವಿಸ್ತರಿಸಲು ಸಭೆಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.**

ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿ ಸಂಶೋಧನಾರ್ಥಿಯಾದ **ರುದ್ರಪ್ಪ ಅಲ್ಲಪ್ಪ ಅರಳಿಮಟ್ಟಿ (ನೊಂ.ದಿ. 15ES014)** ರವರ ಪಿಹೆಚ್.ಡಿ ನೊಂದಣಿ ರದ್ದತಿಯನ್ನು ಹಿಂಪಡೆದು ಅವಧಿ ವಿಸ್ತರಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2023-24:ಸಾ.ಸಿಂ.05- ಪಿಹೆಚ್.ಡಿ-02 ದಿನಾಂಕ: 07.06.2024 |
|---|---|

ವಿಷಯ: **2015-16 ನೇ ಸಾಲಿನ ಸಂಶೋಧನಾರ್ಥಿಯಾದ ಶ್ರೀ. ರಾಮಕೃಷ್ಣ ವಿ (ನೊಂ. ಸಂ. 15PS005) ರವರ ಪಿಹೆಚ್.ಡಿ ಸಂಶೋಧನೆಯ ಹೆಚ್ಚುವರಿ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸುವ ಕುರಿತು.**

ಉಲ್ಲೇಖ:
1. ಶ್ರೀ. ರಾಮಕೃಷ್ಣ ವಿ ಸಂಶೋಧನಾರ್ಥಿ, ರಾಜ್ಯಶಾಸ್ತ್ರ ವಿಭಾಗ, ತು.ವಿ.ತು ರವರ ಮನವಿ ಪತ್ರದ ದಿನಾಂಕ:05.02.2024.
2. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಸಂಖ್ಯೆ: ತುವಿ/ ಸಂ.ವಿ:/2023-24/1043 ದಿನಾಂಕ: 20.02.2024
3. ರಾಜ್ಯಶಾಸ್ತ್ರ ಡಾಕ್ಟರಲ್ ಕಮಿಟಿ ಸಭೆಯ ಶಿಫಾರಸ್ಸಿನ ದಿನಾಂಕ: 18.03.2024.

****

ಮೇಲ್ಕಂಡ ವಿಷಯ & ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀ. **ರಾಮಕೃಷ್ಣ** ವಿ (ನೊಂ. ಸಂ. **15PS005)** ರವರು 2015-16 ನೇ ಸಾಲಿನಲ್ಲಿ **ಪ್ರೊ. ಉದ್ದಗಟ್ಟಿ ವೆಂಕಟೇಶ, ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ ಶಿವಮೊಗ್ಗ - 577451** ಇವರ ಮಾರ್ಗದರ್ಶನದಡಿಯಲ್ಲಿ ಪಿಹೆಚ್.ಡಿ ಸಂಶೋಧನೆಯನ್ನು ಕೈಗೊಂಡಿದ್ದು. ಸದರಿ ಸಂಬಂಧ ಪಿಹೆಚ್.ಡಿ ಸಂಶೋಧನೆಯನ್ನು ಮುಂದುವರಿಸಲು ಕಾಲಾವಕಾಶ ನೀಡುವಂತೆ (ಉಲ್ಲೇಖ 01) ರಲ್ಲಿ ಮನವಿ ಸಲ್ಲಿಸಿರುತ್ತಾರೆ.

ಸದರಿ ಸಂಬಂಧ ಪರಿಶೀಲಿಸಲಾಗಿ, ಸದರಿ ಸಂಶೋಧನಾರ್ಥಿಯು 2015-16 ನೇ ಸಾಲಿನಲ್ಲಿ ಪಿಹೆಚ್.ಡಿ ಗೆ ಆಯ್ಕೆಯಾಗಿದ್ದು, ಪ್ರಸ್ತುತ ಪಿಹೆಚ್.ಡಿ ಸಂಶೋಧನೆಯ ಏಳನೇ ವರ್ಷವು ದಿನಾಂಕ:15.03.2023 ಕ್ಕೆ ಮುಕ್ತಾಯವಾಗಿದ್ದು ಕಾಲಾವಧಿ ವಿಸ್ತರಿಸಿರುವುದಿಲ್ಲ. ಸದರಿ ಸಂಶೋಧನಾರ್ಥಿಯ ಎಂಟು ವರ್ಷಗಳ ಪಿಹೆಚ್.ಡಿ ಸಂಶೋಧನಾ ಕಾಲಾವಧಿಯು ದಿನಾಂಕ:15.03.2024 ಕ್ಕೆ ಮುಕ್ತಾಯಗೊಳ್ಳಲಿದೆ. ಸಂಶೋಧನಾರ್ಥಿಯ ಮನವಿಯ ಮೇರೆಗೆ ಪಿಹೆಚ್.ಡಿ ಹೆಚ್ಚುವರಿ ಕಾಲಾವಧಿ ವಿಸ್ತರಿಸುವ ಬಗ್ಗೆ ಪಿಹೆಚ್.ಡಿ 2012 ವಿನಿಯಮ ಸೆಕ್ಷನ್ 13 (13.1) ರಂತೆ ಡಾಕ್ಟರಲ್ ಕಮಿಟಿ ಸಭೆಯಲ್ಲಿ ಸೆಕ್ಷನ್ 22.3 ರ ಪ್ರಕಾರ ನಿಯಾಮನುಸಾರ ಪರಿಶೀಲಿಸಿ ಸೂಕ್ತ ಶಿಫಾರಸ್ಸನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ (ಉಲ್ಲೇಖ 02) ರ ಕಚೇರಿ ಪತ್ರದಲ್ಲಿ ಅಧ್ಯಕ್ಷರು ಡಾಕ್ಟರಲ್ ಕಮಿಟಿ, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ತಿಳಿಸಲಾಗಿತ್ತು.

ಅದರಂತೆ ಅಧ್ಯಕ್ಷರು, ಡಾಕ್ಟರಲ್ ಕಮಿಟಿ, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು ಇವರು ದಿನಾಂಕ:18.03.2024 ರಂದು ಡಾಕ್ಟರಲ್ ಕಮಿಟಿ ಸಭೆಯನ್ನು ಆಯೋಜಿಸಲಾಗಿದ್ದು, ಈ ಕೆಳಗಿನಂತೆ ಶಿಫಾರಸ್ಸು ನೀಡಿರುತ್ತಾರೆ.

**"ವಿಶ್ವವಿದ್ಯಾನಿಲಯ ಪಿಹೆಚ್.ಡಿ ವಿನಿಯಮ 2012 ರ ಸೆಕ್ಷನ್ 22.3 ರ ಪ್ರಕಾರ ಅರೆಕಾಲಿಕ ಸಂಶೋಧನಾರ್ಥಿಗಳು ಆರು ವರ್ಷ ಮುಕ್ತಾಯವಾಗುವ ಪೂರ್ವದಲ್ಲಿ ಅವಧಿ ವಿಸ್ತರಣೆಗಾಗಿ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. ಆದರೆ ಸದರಿ ಸಂಶೋಧನಾರ್ಥಿಯು ನಿಗದಿತ ಅವಧಿ ಪೂರ್ಣಗೊಂಡು ಎರಡು ವರ್ಷಗಳ ನಂತರ ಮೊದಲ ಬಾರಿಗೆ ಸಂಶೋಧನಾ ಕಾಲಾವಧಿಯ ವಿಸ್ತರಣೆಗೆ ಮನವಿ ಮಾಡಿರುತ್ತಾರೆ. ಡಾಕ್ಟರಲ್ ಸಮಿತಿಯ ಸಭೆಯಲ್ಲಿ ಸಂಶೋಧಕರು ಹಾಗೂ ಮಾರ್ಗದರ್ಶಕರೊಂದಿಗೆ ಚರ್ಚಿಸಿದಾಗ ಮಾರ್ಗದರ್ಶಕರು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಮಾರ್ಗದರ್ಶನ,**

ಅಧ್ಯಯನ ಪರಿಶೀಲನೆ ವಿಳಂಬವಾಗುತ್ತಿದೆ ಎಂಬ ಮಾಹಿತಿ ನೀಡಿರುತ್ತಾರೆ. ಆದ್ದರಿಂದ ಸಂಶೋಧಕರು ಹಾಗೂ ಮಾರ್ಗದರ್ಶಕರ ಮನವಿಯಂತೆ ಒಂದು ಬಾರಿ ಮೂರು ತಿಂಗಳಿಗೆ ಮೀರದಂತೆ ನಿಗದಿತ ಶುಲ್ಕ ಹಾಗೂ ವಿಳಂಬಕ್ಕೆ ದಂಡ ಶುಲ್ಕದೊಂದಿಗೆ ಸಂಶೋಧನಾ ಕಾಲಾವಧಿಯನ್ನು ವಿಸ್ತರಿಸುವ ಅಂತಿಮ ನಿರ್ಧಾರವನ್ನು ವಿಶ್ವವಿದ್ಯಾನಿಲಯವು ತೆಗೆದುಕೊಳ್ಳಲು ಸಭೆಯು ಶಿಫಾರಸ್ಸು ಮಾಡಿರುತ್ತದೆ".

**2015-16** ನೇ ಸಾಲಿನ ಸಂಶೋಧನಾರ್ಥಿಗಳಿಗೆ ಕಾಲಾವಧಿಯನ್ನು ವಿಸ್ತರಿಸಿ ದಂಡ ಶುಲ್ಕವನ್ನು ಪಾವತಿಸುವ ಸಂಬಂಧ ದಿನಾಂಕ: **21.07.2023** ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪ್ರತಿ ಮಾಹೆಯಾನ ರೂ. **10,000/-** ಗಳನ್ನು ವಿಶ್ವವಿದ್ಯಾನಿಲಯಕ್ಕೆ ದಂಡಶುಲ್ಕವನ್ನು ಪಾವತಿಸುವಂತೆ ನಿರ್ಣಯಿಸಲಾಗಿರುತ್ತದೆಂಬ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರುತ್ತಾ ಪ್ರಸ್ತುತ ಸದರಿ ಸಂಶೋಧನಾರ್ಥಿಯ ಪಿಹೆಚ್.ಡಿ ಸಂಶೋಧನೆಯು ಮಹಾಪ್ರಬಂಧವನ್ನು ಸಲ್ಲಿಸುವ ಕೃತಿಚೌರ್ಯ ತಪಾಸಣೆಯ ಕೊನೆಯ ಹಂತದಲ್ಲಿರುತ್ತದೆ.

ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿ ಸಂಶೋಧನಾರ್ಥಿಯಾದ ಶ್ರೀ. ರಾಮಕೃಷ್ಣ ವಿ (ನೊಂ. ಸಂ. **15PS005**) ರವರಿಗೆ ಡಾಕ್ಟರಲ್ ಕಮಿಟಿ ಸಭೆಯ ಶಿಫಾರಸ್ಸಿನನ್ವಯ ಒಂದು ಬಾರಿ ಮೂರು ತಿಂಗಳಿಗೆ ಮೀರದಂತೆ ನಿಗದಿತ ಶುಲ್ಕ ಹಾಗೂ ವಿಳಂಬಕ್ಕೆ ದಂಡ ಶುಲ್ಕದೊಂದಿಗೆ ಪಿಹೆಚ್.ಡಿ ಸಂಶೋಧನಾ ಹೆಚ್ಚುವರಿ ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023-24:ಸಾ.ಸಿಂ-05:ಪ.ವಿ.-03 ದಿನಾಂಕ:07.06.2024 |
|---|---|

ವಿಷಯ : ತುಮಕೂರು ವಿಶ್ವವಿದ್ಯಾನಿಲಯದ ಹದಿನೇಳನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಕುರಿತು.

ಉಲ್ಲೇಖ : 1) ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಪತ್ರ ಸಂಖ್ಯೆ: ಜಿಎಸ್ 02 ಜಿಯುಎಂ 2016 ದಿನಾಂಕ:18.02.2016

2) ಸರ್ಕಾರದ ಪತ್ರ ಸಂಖ್ಯೆ: ಇಡಿ 398 ಯುಆರ್‌ಸಿ 2014 (3) ದಿನಾಂಕ:14.10.2014

* * *

ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 69 ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

1. ಸಿಂಡಿಕೇಟ್‌ನ ಮೂರನೇ ಎರಡರಷ್ಟಕ್ಕೆ ಕಡಿಮೆ ಇಲ್ಲದ ಸದಸ್ಯರು, ಯಾವೊಬ್ಬ ವ್ಯಕ್ತಿಗೆ, ಅವನ ಶ್ರೇಷ್ಠ ಸಾಧನೆ ಮತ್ತು ಸ್ಥಾನಮಾನದ ಕಾರಣದಿಂದಾಗಿ ಅವರ ಅಭಿಪ್ರಾಯದಲ್ಲಿ, ಅಂಥ ಗೌರವ ಪದವಿ ಅಥವಾ ಇತರೆ ವಿದ್ಯಾವಿಷಯಕ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯ ಮತ್ತು ಸರಿಯಾದ ವ್ಯಕ್ತಿ ಎಂಬ ಆಧಾರದ ಮೇಲೆ ಗೌರವ ಪದವಿ ಅಥವಾ ವಿದ್ಯಾವಿಷಯಕ ಪ್ರಶಸ್ತಿಯನ್ನು ಪ್ರದಾನ ಮಾಡಬೇಕೆಂದು ಶಿಫಾರಸ್ಸು ಮಾಡಿದರೆ, ಸಿಂಡಿಕೇಟ್, ಸಂಬಂಧಪಟ್ಟ ವ್ಯಕ್ತಿಗೆ ಅದನ್ನು ಪ್ರದಾನ ಮಾಡಲು ಕುಲಾಧಿಪತಿಯವರ ಅನುಮೋದನೆಗಾಗಿ ಶಿಫಾರಸ್ಸು ಮಾಡಬಹುದು.
2. ಗೌರವ ಪದವಿಯನ್ನು ಅಥವಾ ಪ್ರಶಸ್ತಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರದಾನ ಮಾಡತಕ್ಕದ್ದು, ಅದನ್ನು ಕೇವಲ ಒಂದು ವಾಡಿಕೆ ಕ್ರಮವಾಗಿ ಪ್ರದಾನ ಮಾಡತಕ್ಕದ್ದಲ್ಲ. ಸಾಹಿತ್ಯ, ತತ್ವಜ್ಞಾನ, ಕಲೆ, ಸಂಗೀತ, ವರ್ಣ ಚಿತ್ರಕಲೆ ಅಥವಾ ಕಲೆ, ವಿಜ್ಞಾನ ಅಥವಾ ತಂತ್ರಜ್ಞಾನದ ವ್ಯಾಸಂಗ ವಿಭಾಗಗಳಿಗೆ ವಹಿಸಿಕೊಡಲಾಗಿರುವ ಯಾವುದೇ ಇತರೆ ವಿಷಯದಲ್ಲಿ ಮುನ್ನಡೆಗಾಗಿ ಗಣನೀಯ ಕೊಡುಗೆ ನೀಡಿದ ಅಥವಾ ಶಿಕ್ಷಣದ ಧ್ಯೇಯಗಳಿಗಾಗಿ ವಿಶಿಷ್ಟ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಅಂಥ ಗೌರವ ಪದವಿಗಳ ನೀಡಿಕೆಯ ಉದ್ದೇಶಕ್ಕಾಗಿ ಗುರುತಿಸತಕ್ಕದ್ದು.
3. ವಿಜ್ಞಾನ ಮತ್ತು ತಂತ್ರಜ್ಞಾನ ಶಾಖೆಗಳ, ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಂಸ್ಥೆಗಳಲ್ಲಿ ಯೋಜನೆ, ಸಂಘಟನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಶಾಖೆಗಳಲ್ಲಿನ ಅಂಥ ವ್ಯಕ್ತಿಗಳಿಗೆ ಡಾಕ್ಟರ್ ಆಫ್ ಸೈನ್ಸ್ (ಡಿಎಸ್‌ಸಿ) ಪದವಿಯನ್ನು ಹಾನರಿಸ್‌ಕಾಸಾ (ಗೌರವ ಪದವಿ) ಆಗಿ ಪ್ರದಾನ ಮಾಡಬಹುದು.
4. ಪ್ರತಿಷ್ಠಿತ ನ್ಯಾಯವಾದಿಗಳು, ನ್ಯಾಯಾಧೀಶರು, ಜ್ಯೂರಿಗಳು, ರಾಜಕೀಯ ಗಣ್ಯವ್ಯಕ್ತಿಗಳಿಗೆ ಅಥವಾ ಸಾರ್ವಜನಿಕ ಕ್ಷೇತ್ರದ ಧ್ಯೇಯಗಳಿಗಾಗಿ ಗಮನಾರ್ಹ ಕೊಡುಗೆ ನೀಡಿದ ವ್ಯಕ್ತಿಗಳಿಗೆ ಡಾಕ್ಟರ್ ಆಫ್ ಲಾಜ್ (ಎಲ್‌ಎಲ್.ಡಿ.) ಪದವಿಯನ್ನು ಹಾನರಿಸ್‌ಕಾಸಾ (ಗೌರವ ಪದವಿ) ಆಗಿ ಪ್ರದಾನ ಮಾಡಬಹುದು.

ಮುಂದುವರೆದು, ವಿಶ್ವವಿದ್ಯಾನಿಲಯಗಳಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಸಂಬಂಧ ಮೇಲ್ಕಂಡ ಉಲ್ಲೇಖ (01) ರಲ್ಲಿ ಘನತೆವೆತ್ತ ರಾಜ್ಯಪಾಲರ ಸಚಿವಾಲಯದಿಂದ ಅತ್ಯುತ್ತಮ ಶಿಕ್ಷಣ ತಜ್ಞರುಗಳಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಬಗ್ಗೆ ಸೂಚನೆಗಳನ್ನು ನೀಡಿರುತ್ತಾರೆ.

1. The recommendation for the approval of the Chancellor for the conferment of the Honorary Degree shall be in conformity with Section 69 of the Karnataka State Universities Act, 2000.
2. The names before proposed must be properly considered and deliberated in the Syndicate.
3. After deliberation and consideration of such names in the Syndicate, the same shall be forwarded to the Scrutinizing Committee by the University.
4. The Chancellor may constitute expert scrutiny committee consisting of three members. One among the members of the Committee is the nominee of the University nominated from amongst the former Vice Chancellor, retired Secretaries of Govt. of Karnataka or Union of India.

(ಪು.ತಿ.ನೋ.)

5. The University may nominate its nominee to the Scrutinizing Committee well in advance.
6. The recommendations of the University for conferring Honorary Degree must be forwarded to the Scrutinizing Committee at least 45 days in advance to the date of Convocation.
7. The number of names proposed by the Scrutiny Committee to confer honorary degrees should not exceed more than three in a year.
8. The names proposed / recommended by the Syndicate of the University should be kept confidential and under no circumstances be disclosed to the recipient or to the press till the approval of the Chancellor is communicated.

ಮುಂದುವರೆದು, ವಿಶ್ವವಿದ್ಯಾನಿಲಯಗಳಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಪ್ರಕ್ರಿಯೆಯಲ್ಲಿ ಈ ಕೆಳಕಂಡ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಕರ್ನಾಟಕ ಸರ್ಕಾರವು ಉಲ್ಲೇಖಿತ ಪತ್ರ (02) ರಲ್ಲಿ ನಿರ್ದೇಶನವನ್ನು ನೀಡಿರುತ್ತದೆ.

1) ಪ್ರತಿ ವಿಶ್ವವಿದ್ಯಾನಿಲಯವು ನಿವೃತ್ತ ಕುಲಪತಿಗಳು / ನಿವೃತ್ತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ/ ನಿವೃತ್ತ ಉಪ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸುವುದು.

2) ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದ ಕರಡು ಪಟ್ಟಿಯನ್ನು ಮೇಲೆ ಕಾಣಿಸಿದ ತಜ್ಞರ ಸಮಿತಿಯ ಮುಂದೆ ಮಂಡಿಸಿ ಅಂತಿಮ ಮೂರು ಜನಕ್ಕೆ ಸೀಮಿತಗೊಂಡ ಪಟ್ಟಿಯನ್ನು ಪಡೆದು, ಸರ್ಕಾರಕ್ಕೆ ಸಲ್ಲಿಸುವುದು.

3) ಸರ್ಕಾರವು ಈ ಅಂತಿಮಗೊಂಡ ಪಟ್ಟಿಯನ್ನು ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸುವುದು.

4) ಕುಲಾಧಿಪತಿಗಳ ಅಂತಿಮ ತೀರ್ಮಾನದಂತೆ ಗೌರವ ಡಾಕ್ಟರೇಟ್ ಪದವಿಗಳ ಪ್ರದಾನಕ್ಕೆ ಆಯಾ ವಿಶ್ವವಿದ್ಯಾನಿಲಯಗಳು ಸೂಕ್ತ ಕ್ರಮ ಕೈಗೊಳ್ಳುವುದು.

ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ತರುತ್ತಾ, ತುಮಕೂರು ವಿಶ್ವವಿದ್ಯಾನಿಲಯವು ಹದಿನೇಳನೇ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ:08.07.2024 ರಿಂದ ದಿನಾಂಕ:20.07.2024 ರ ಒಳಗೆ ನಡೆಸಲು ಉದ್ದೇಶಿಸಿದ್ದು ಈ ಸಂಬಂಧ ಘಟಿಕೋತ್ಸವ ದಿನಾಂಕವನ್ನು ಮಾನ್ಯ ಕುಲಾಧಿಪತಿಗಳಿಂದ ನಿಗಧಿಗೊಳಿಸಲು ಹಾಗೂ ಹದಿನೇಳನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಸಂಬಂಧ ಒಬ್ಬ ನಿವೃತ್ತ ಕುಲಪತಿಗಳು / ನಿವೃತ್ತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ/ ನಿವೃತ್ತ ಉಪ ನ್ಯಾಯಾಲಯದ ನ್ಯಾಯಾಧೀಶರನ್ನು ನಾಮನಿರ್ದೇಶನ ಮಾಡುವ ಕುರಿತು **ಐದನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಮುಂದೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.**

| ವಿಷಯ ಸಂಖ್ಯೆ | 2023-24:ಸಾ.ಸಿಂ-05:ಪ.ವಿ.-04 ದಿನಾಂಕ:07.06.2024 |
|---|---|

**ವಿಷಯ : ತುಮಕೂರು ವಿಶ್ವವಿದ್ಯಾನಿಲಯದ 17 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಖರ್ಚುವೆಚ್ಚಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.**

******

ತುಮಕೂರು ವಿಶ್ವವಿದ್ಯಾನಿಲಯದ 17 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಶಾಮಿಯಾನ ಮತ್ತು ಇನ್ನಿತರೆ ಪರಿಕರಗಳು, ವಿದ್ಯುತ್ ದೀಪಾಲಾಂಕಾರ, ಸೌಂಡ್‌ಸಿಸ್ಟಂ ಮತ್ತು ಎಲೆಕ್ಟ್ರಿಕಲ್ ಪಾಯಿಂಟ್, ಆಹ್ವಾನ ಪತ್ರಿಕೆ ಮತ್ತು ಇತರೆ ಮುದ್ರಣ ಸಾಮಗ್ರಿಗಳು, ಉಪಹಾರ ಮತ್ತು ಊಟ, ವೇದಿಕೆ ವಿನ್ಯಾಸ, ಸುವರ್ಣಲೇಪಿತ ಬೆಳ್ಳಿ ಪದಕ, ಫೈಲ್ ಫೋಲ್ಡರ್ ಮತ್ತು ಸಮಾರಂಭದಲ್ಲಿ ಭಾಗವಹಿಸುವ ಗಣ್ಯರ ಅತಿಥಿ ಸತ್ಕಾರಕ್ಕೆ ಹಾಗೂ ಘಟಿಕೋತ್ಸವದ ಇತರೆ ಖರ್ಚು ವೆಚ್ಚಗಳಿಗಾಗಿ ಅಂದಾಜು ರೂ.50,00,000/- (ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಗಳ ವೆಚ್ಚವಾಗಬಹುದಾಗಿದ್ದು, ಆಡಳಿತಾತ್ಮಕ ಅನುಮೋದನೆ ಕೋರಿ ಮತ್ತು ಸದರಿ ಘಟಿಕೋತ್ಸವ ಸಮಾರಂಭದ ಕಾರ್ಯ ನಿರ್ವಹಣೆಯನ್ನು (Event Management) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ - 1999 ರ ಕಲಂ 4(ಜಿ) ವಿನಾಯಿತಿ ಪಡೆದಿರುವ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್ (KSMC&A) ಇವರಿಗೆ ನೀಡುವ ಸಂಬಂಧ **ಐದನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಮುಂದೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.**

| ವಿಷಯ ಸಂಖ್ಯೆ | 2023–24:ಸಾ.ಸಿಂ–05:ಪ.ವಿ.–05 ದಿನಾಂಕ:07.06.2024 |
|---|---|

**ವಿಷಯ: ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳ ಮೌಲ್ಯಮಾಪನ ಪಿಹೆಚ್.ಡಿ./ BOE ಮತ್ತು BOAE ನಲ್ಲಿ ಕಾರ್ಯ ನಿರ್ವಹಿಸುವ ಅಧ್ಯಾಪಕರಿಗೆ ಸಂಭಾವನೆ ನೀಡುವ ಕುರಿತು.**

* * * * * * *

ಸರ್ಕಾರದ ಪತ್ರ ಸಂಖ್ಯೆ:ಇಡಿ/385/ಯು.ಆರ್.ಸಿ.2022 ದಿನಾಂಕ 16/10/2023 ರನ್ವಯ ಸ್ನಾತಕ/ ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಸರ್ಕಾರವು ಏಕರೂಪ ಸಂಭಾವನೆ ಶುಲ್ಕ ನಿಯಮವಳಿಗಳನ್ನು ನಿಗದಿಪಡಿಸಿರುವುದು ಸರಿಯಷ್ಠೆ. ಸದರಿ ನಿಯಮವಳಿಗಳನ್ನು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಅಳವಡಿಸಿಕೊಂಡಿದ್ದು. ಸದರಿ ಏಕರೂಪ ಸಂಭಾವನೆ ಆದೇಶದಲ್ಲಿ ಕೆಲವೊಂದು ಪರೀಕ್ಷಾ ಕಾರ್ಯ ನಿರ್ವಹಿಸುವ ಅಧ್ಯಾಪಕರಿಗೆ ಸಂಭಾವನೆ ಭತ್ಯೆ ನೀಡುವಲ್ಲಿ ಸ್ಪಷ್ಠ ಆದೇಶಗಳಿಲ್ಲದ ಕಾರಣ ಸಂಭಾವನೆ ಭತ್ಯೆ ನೀಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಕೆಳಕಂಡ ವಿವಿಧ ಪರೀಕ್ಷಾ ಕಾರ್ಯ ನಿರ್ವಹಿಸುವ ಅಧ್ಯಾಪಕರಿಗೆ ಈ ಹಿಂದಿನಂತೆ ಸಂಭಾವನೆ ನಿಗದಿಪಡಿಸಬೇಕಾಗಿರುತ್ತದೆ.

- ಪಿಹೆಚ್.ಡಿ. ಪದವಿಯ BOE ಸಭೆಗೆ ಹಾಜರಾಗುವ ಸ್ಥಳೀಯ ಅಧ್ಯಾಪಕರಿಗೆ ಈ ಹಿಂದೆ ನೀಡುತ್ತಿದ್ದ ಸಂಭಾವನೆ ಭತ್ಯೆ ರೂ.650-00 ಗಳನ್ನು ಪಾವತಿಸುವ ಹಾಗೂ ಪಿಹೆಚ್.ಡಿ. ಮೌಖಿಕ ಪರೀಕ್ಷೆ ನಡೆಸುವ ಸ್ಥಳೀಯ ಅಧ್ಯಾಪಕರಿಗೆ ರೂ.600-00 ಭತ್ಯೆ ಪಾವತಿಸುವ ಕುರಿತು. ಮತ್ತು ಮಹಾಪ್ರಬಂಧದ ಆಂತರಿಕ ಮೌಲ್ಯಮಾಪಕರ ಸಂಭಾವನೆ ಭತ್ಯೆ ರೂ.2,000-00
- ಸ್ನಾತಕ/ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪರೀಕ್ಷೆಗಳ BOAE ನ ಸಭೆಯಲ್ಲಿ ಭಾಗಿಯಾಗುವ ಬೇರೆ ಕಾಲೇಜಿನ ಸ್ಥಳೀಯ ಅಧ್ಯಾಪಕರಿಗೆ ರೂ.800-00 ಹಾಗೂ ಬಾಹ್ಯ ಕಾಲೇಜುಗಳ ಅಧ್ಯಾಪಕರಿಗೆ ರೂ. 1,000-00 ಸಾವಿರದಂತೆ ಪಾವತಿಸುವ ಸಂಬಂಧ. ಹಾಗೂ
- ಸ್ನಾತಕೋತ್ತರ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಈ ಹಿಂದಿನಂತೆ ಎರಡು ಹಂತದಲ್ಲಿ ಈಗಾಗಲೇ ಮೌಲ್ಯಮಾಪನ ಮಾಡಿಸಲಾಗಿದ್ದು ಮತ್ತು ಮುಂದಿನ ದಿನಗಳಲ್ಲಿ ಸದರಿ ಕ್ರಮವನ್ನು ಮುಂದುವರಿಸುವ ಸಲುವಾಗಿ ಹಾಗೂ ಮೌಲ್ಯಮಾಪನ ಮಾಡಿದ ಅಧ್ಯಾಪಕರಿಗೆ ಏಕರೂಪ ಸಂಭಾವನೆಯ ಅಧಿಸೂಚನೆಯಂತೆ ಭತ್ಯೆಯನ್ನು ಪಾವತಿಸುವ ಸಂಬಂಧ **ಐದನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಮುಂದೆ ಚರ್ಚೆ ಮತ್ತು ನಿರ್ಣಯ ಕೋರಿ ಮಂಡಿಸಿದೆ.**

| ವಿಷಯ ಸಂಖ್ಯೆ : | 2024:, ಸಾ.ಸಿ.-05: ಕಾ.ಅ.ಪ-01: ದಿನಾಂಕ: 07.06.2024 |
|---|---|

ವಿಷಯ: 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಸ್ವೀಕೃತವಾದ ಪ್ರಸ್ತಾವನೆಗಳ ಕುರಿತು.

* * *

2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ, ಈ ಕಚೇರಿ ಅಧಿಸೂಚನೆ ಸಂಖ್ಯೆ ತುವಿ:ಕಾ.ಅ.ಪ:2024–25:298 ದಿನಾಂಕ 14.05.2024 ರಲ್ಲಿ ವಿವಿಧ ಸಂಯೋಜನೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ಸಂಬಂಧ, ವಿವಿಧ ಸಂಯೋಜನೆಗೆ ಸಂಯೋಜಿತ ಕಾಲೇಜುಗಳಿಂದ ಹಾಗೂ 02 ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ವಿವಿಧ ಸಂಸ್ಥೆಗಳಿಂದ ಕೆಳಕಂಡಂತೆ ಅರ್ಜಿಗಳು ಸ್ವೀಕೃತವಾಗಿರುತ್ತವೆ.

| | | |
|---|---|---|
| ಸಂಯೋಜನೆಯ ನವೀಕರಣಕ್ಕಾಗಿ | - | 78 ಕಾಲೇಜುಗಳು |
| ವಿಸ್ತರಣಾ ಸಂಯೋಜನೆಗಾಗಿ (ಹೊಸ ಕೋರ್ಸ್) | - | 12 ಕಾಲೇಜುಗಳು |
| ಪ್ರವೇಶಮಿತಿ ಹೆಚ್ಚಳಕ್ಕೆ (ಸ್ನಾತಕ) | - | 07 ಕಾಲೇಜುಗಳು |
| ಪ್ರವೇಶಮಿತಿ ಹೆಚ್ಚಳಕ್ಕೆ (ಸ್ನಾತಕೋತ್ತರ) | - | 01 ಕಾಲೇಜು |
| ಶಾಶ್ವತ ಸಂಯೋಜನೆಗಾಗಿ | - | 02 ಕಾಲೇಜುಗಳು |
| ಶಾಶ್ವತ ಸಂಯೋಜನೆಯ ನವೀಕರಣಕ್ಕಾಗಿ | - | 02 ಕಾಲೇಜುಗಳು |
| ಹೊಸ ಕಾಲೇಜು ಸಂಯೋಜನೆಗಾಗಿ | - | 02 ಕಾಲೇಜುಗಳು |
| ವ್ಯಾಸಂಗ ಕ್ರಮದ ಮುಚ್ಚುವಿಕೆ | - | 01 ಕಾಲೇಜು |

**ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ (59) ರ ಉಪಪ್ರಕರಣ (6), (7) ಮತ್ತು (10) ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.**

(6) "ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅದನ್ನು ಪರಿಶೀಲನೆಗಾಗಿ ಸಿಂಡಿಕೇಟಿನ ಮುಂದೆ ಇಡತಕ್ಕದ್ದು, ಸಿಂಡಿಕೇಟು ಸಂಯೋಜನೆಯ ಪ್ರತಿಯೊಂದು ಅರ್ಜಿಯನ್ನು ಪರಿಶೀಲಿಸಿದ ತರುವಾಯ ಸ್ಥಳೀಯ ವಿಚಾರಣಾ ಸಮಿತಿಯಿಂದ ಸ್ಥಳೀಯ ವಿಚಾರಣೆಗೆ ನಿರ್ದೇಶನ ನೀಡತಕ್ಕದ್ದು;
ಪರಂತು, ಸ್ಥಳೀಯ ವಿಚಾರಣಾ ಸಮಿತಿಯು, ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಕನಿಷ್ಠಪಕ್ಷ ಒಬ್ಬರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(7) ಸ್ಥಳೀಯ ವಿಚಾರಣಾ ಸಮಿತಿಯು, ಅದನ್ನು ರಚಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಒಂದು ವರದಿಯನ್ನು ವಿದ್ಯಾವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು."

(10) ರಿಜಿಸ್ಟ್ರಾರನು, ಅರ್ಜಿಯನ್ನು ಮತ್ತು ಅದರ ಅಡಕಗಳನ್ನು, ಅನುಬಂಧಗಳನ್ನು, ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾವಿಷಯಕ ಪರಿಷತ್‌ನ ಹಾಗೂ ಸಿಂಡಿಕೇಟಿನ ಎಲ್ಲಾ ನಡವಳಿಗಳನ್ನು ಅಂತಿಮ ತೀರ್ಮಾನ ಕೈಗೊಳ್ಳುವುದಕ್ಕಾಗಿ ಮುಂಬರುವ ವರ್ಷದ ಮಾರ್ಚ್ 31 ಕ್ಕೆ ಮೊದಲು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು."

ಈ ಮೇಲಿನ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | **2023–24:ಸಾ.ಸಿ 05: ಇ.ವಿ–01 ದಿನಾಂಕ:07.06.2024** |
|---|---|

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನ ಮೊದಲ ಹಂತದ ಕಾಮಗಾರಿಯ ಕರಾರು ಅವಧಿ ನವೀಕರಣ ಕುರಿತು.

***

ಹಿರಿಯ ವ್ಯವಸ್ಥಾಪಕರು (ಸಿವಿಲ್), ಮೆ. ರೈಟ್ಸ್ ಲಿ, ಬೆಂಗಳೂರು ರವರು ದಿನಾಂಕ:07.02.2024 ರಂದು ಪತ್ರವನ್ನು ಬರೆದು, ಮೆ. ರೈಟ್ಸ್ ಸಂಸ್ಥೆ ಮತ್ತು ತುಮಕೂರು ವಿಶ್ವವಿದ್ಯಾನಿಲಯದ ನಡುವೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ ಮತ್ತು ಯೋಜನೆಯ ಜಾರಿಗಾಗಿ (ಮೊದಲನೇ ಹಂತ ಮತ್ತು ಎರಡನೇ ಹಂತ) ಮಾಡಿಕೊಳ್ಳಲಾದ ಕರಾರಿನ ಅವಧಿಯು ಕ್ರಮವಾಗಿ ದಿನಾಂಕ:19.01.2024 ಮತ್ತು 21.01.2024 ಕ್ಕೆ ಮುಕ್ತಾಯವಾಗಿರುತ್ತದೆ. ಸದರಿ ಕರಾರಿನ ಅನ್ವಯ ನಾವುಗಳು ಪ್ರಸ್ತುತ ವಿಶ್ವವಿದ್ಯಾನಿಲಯದ ನೂತನ ಕ್ಯಾಂಪಸ್‌ನಲ್ಲಿ ಮುಖ್ಯದ್ವಾರ ನಿರ್ಮಾಣ, ಗ್ಯಾಂಟ್ರಿ ಬೋರ್ಡ್, ಶೈಕ್ಷಣಿಕ ಭವನ–01, ಹೊರಾಂಗಣ ಅಭಿವೃದ್ಧಿ ಕೆಲಸಗಳಾದ ರಸ್ತೆ, ಚರಂಡಿ, ತ್ಯಾಜ್ಯ ನೀರು ಸಂಸ್ಕರಣಾ ಘಟಕ, ನೀರಿನ ಟ್ಯಾಂಕ್ ಮತ್ತು ಹೊರಾಂಗಣ ವಿದ್ಯುದ್ದೀಕರಣ ಕೆಲಸಗಳು ಪ್ರಗತಿಯಲ್ಲಿವೆ. ಮುಖ್ಯದ್ವಾರ ಮತ್ತು ಶೈಕ್ಷಣಿಕ ಭವನ ನಿರ್ಮಾಣ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು, ದಿನಾಂಕ:22.06.2017 ರ ಸರ್ಕಾರದ ಆದೇಶದಂತೆ ನಮಗೆ ವಹಿಸಲಾದ ಕಾಮಗಾರಿಗಳನ್ನು ಸರ್ಕಾರದ ಮತ್ತು ವಿಶ್ವವಿದ್ಯಾನಿಲಯದ ಅನುದಾನದ ಕೊರತೆಯಿಂದ ಇನ್ನು ಪ್ರಾರಂಭಿಸಬೇಕಿರುತ್ತದೆ.

ಆದ್ದರಿಂದ, ಮೊದಲ ಹಂತದ ಕಾಮಗಾರಿಯ ಜೊತೆಗೆ ಎರಡನೇ ಹಂತದ ಕಾಮಗಾರಿಯು ಸೇರಿದಂತೆ ಒಡಂಬಡಿಕೆ ಪತ್ರವನ್ನು 36 ತಿಂಗಳಿಗೆ ಅಂದರೆ ದಿನಾಂಕ:22.01.2024 ರಿಂದ 21.01.2027 ರವರೆಗೆ (01 ವರ್ಷ ದೋಷಾಯುಕ್ತ ಹೊಣೆಗಾರಿಕಾ ಅವಧಿ ಸೇರಿದಂತೆ) ವಿಸ್ತರಿಸುವಂತೆ ಕೋರಿ 02 ಸೆಟ್ ಒಡಂಬಡಿಕೆ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ಮೆ. ರೈಟ್ಸ್ ಸಂಸ್ಥೆಯೊಂದಿಗೆ ಮೊದಲ ಹಂತದ ಕಾಮಗಾರಿಯ ಶೈಕ್ಷಣಿಕ ಭವನ–01 ನಿರ್ಮಾಣ ಸಂಬಂಧ ಈ ಹಿಂದೆ ದಿನಾಂಕ:05.10.2023 ರಂದು ದಿನಾಂಕ:22.07.2023 ರಿಂದ ಪೂರ್ವಾನ್ವಯವಾಗುವಂತೆ ಮಾಡಿಕೊಳ್ಳಲಾದ ಮುಂದುವರಿಕೆ ಒಡಂಬಡಿಕೆಯ ಅವಧಿಯು ದಿನಾಂಕ:21.01.2024 ಕ್ಕೆ ಮುಕ್ತಾಯವಾಗಿರುತ್ತದೆ. ಮೆ. ರೈಟ್ಸ್ ಸಂಸ್ಥೆಯವರು ಮೊದಲ ಹಂತದ ಕಾಮಗಾರಿಯ ಜೊತೆಗೆ ಎರಡನೇ ಹಂತದ ಕಾಮಗಾರಿಯು ಸೇರಿದಂತೆ ಒಡಂಬಡಿಕೆಯ ಅವಧಿಯನ್ನು 03 ವರ್ಷಗಳ ಅವಧಿಗೆ ಅಂದರೆ ದಿನಾಂಕ:22.01.2024 ರಿಂದ 21.01.2027 ರವರೆಗೆ (01 ವರ್ಷ ದೋಷಾಯುಕ್ತ ಹೊಣೆಗಾರಿಕಾ ಅವಧಿ ಸೇರಿದಂತೆ) ವಿಸ್ತರಿಸುವಂತೆ ಕೋರಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2023-24:ಸಾ.ಸಿ 05: ಇ.ವಿ-02 ದಿನಾಂಕ:07.06.2024 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ವಿವಿಧ ಹಾಸ್ಟೆಲ್ ಕಟ್ಟಡ ಮತ್ತು ಮುಖ್ಯದ್ವಾರ ನಿರ್ಮಾಣ ಕಾಮಗಾರಿಗಳ ಕರಾರು ಅವಧಿ ನವೀಕರಣ ಕುರಿತು.**

***

ಹಿರಿಯ ವ್ಯವಸ್ಥಾಪಕರು (ಸಿವಿಲ್), ಮೆ. ರೈಟ್ಸ್ ಲಿ, ಬೆಂಗಳೂರು ರವರು ದಿನಾಂಕ:07.02.2024 ರಂದು ಪತ್ರವನ್ನು ಬರೆದು, ಮೆ. ರೈಟ್ಸ್ ಸಂಸ್ಥೆ ಮತ್ತು ತುಮಕೂರು ವಿಶ್ವವಿದ್ಯಾನಿಲಯದ ನಡುವೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ ಮತ್ತು ಯೋಜನೆಯ ಜಾರಿಗಾಗಿ (ಮೊದಲನೇ ಹಂತ ಮತ್ತು ಎರಡನೇ ಹಂತ) ಮಾಡಿಕೊಳ್ಳಲಾದ ಕರಾರಿನ ಅವಧಿಯು ಕ್ರಮವಾಗಿ ದಿನಾಂಕ:19.01.2024 ಮತ್ತು 21.01.2024 ಕ್ಕೆ ಮುಕ್ತಾಯವಾಗಿರುತ್ತದೆ. ಸದರಿ ಕರಾರಿನ ಅನ್ವಯ ನಾವುಗಳು ಪ್ರಸ್ತುತ ವಿಶ್ವವಿದ್ಯಾನಿಲಯದ ನೂತನ ಕ್ಯಾಂಪಸ್‌ನಲ್ಲಿ ಮುಖ್ಯದ್ವಾರ ನಿರ್ಮಾಣ, ಗ್ಯಾಂಟ್ರಿ ಬೋರ್ಡ್, ಶೈಕ್ಷಣಿಕ ಭವನ-01, ಹೊರಾಂಗಣ ಅಭಿವೃದ್ಧಿ ಕೆಲಸಗಳಾದ ರಸ್ತೆ, ಚರಂಡಿ, ತ್ಯಾಜ್ಯ ನೀರು ಸಂಸ್ಕರಣಾ ಘಟಕ, ನೀರಿನ ಟ್ಯಾಂಕ್ ಮತ್ತು ಹೊರಾಂಗಣ ವಿದ್ಯುದ್ಧೀಕರಣ ಕೆಲಸಗಳು ಪ್ರಗತಿಯಲ್ಲಿವೆ. ಮುಖ್ಯದ್ವಾರ ಮತ್ತು ಶೈಕ್ಷಣಿಕ ಭವನ ನಿರ್ಮಾಣ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು, ದಿನಾಂಕ:22.06.2017 ರ ಸರ್ಕಾರದ ಆದೇಶದಂತೆ ನಮಗೆ ವಹಿಸಲಾದ ಕಾಮಗಾರಿಗಳನ್ನು ಸರ್ಕಾರದ ಮತ್ತು ವಿಶ್ವವಿದ್ಯಾನಿಲಯದ ಅನುದಾನದ ಕೊರತೆಯಿಂದ ಇನ್ನು ಪ್ರಾರಂಭಿಸಬೇಕಿರುತ್ತದೆ.

ಆದ್ದರಿಂದ, ವಿವಿಧ ಹಾಸ್ಟೆಲ್ ಕಟ್ಟಡ ಮತ್ತು ಮುಖ್ಯದ್ವಾರ ನಿರ್ಮಾಣ ಕಾಮಗಾರಿಯ ಒಡಂಬಡಿಕೆ ಪತ್ರವನ್ನು 24 ತಿಂಗಳಿಗೆ ಅಂದರೆ ದಿನಾಂಕ:20.01.2024 ರಿಂದ 19.01.2026 ರವರೆಗೆ (01 ವರ್ಷ ದೋಷಾಯುಕ್ತ ಹೊಣೆಗಾರಿಕಾ ಅವಧಿ ಸೇರಿದಂತೆ) ವಿಸ್ತರಿಸುವಂತೆ ಕೋರಿ 02 ಸೆಟ್ ಒಡಂಬಡಿಕೆ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ಮೆ. ರೈಟ್ಸ್ ಸಂಸ್ಥೆಯೊಂದಿಗೆ ವಿವಿಧ ಹಾಸ್ಟೆಲ್ ಕಟ್ಟಡ ಮತ್ತು ಮುಖ್ಯದ್ವಾರ ನಿರ್ಮಾಣ ಕಾಮಗಾರಿಯ ನಿರ್ಮಾಣ ಸಂಬಂಧ ಈ ಹಿಂದೆ ದಿನಾಂಕ:16.05.2022 ರಂದು ಮಾಡಿಕೊಳ್ಳಲಾದ ಮುಂದುವರಿಕೆ ಒಡಂಬಡಿಕೆಯ ಅವಧಿಯು ದಿನಾಂಕ:16.05.2022 ರಿಂದ ದಿನಾಂಕ:19.01.2024 ಕ್ಕೆ ಮುಕ್ತಾಯವಾಗಿರುತ್ತದೆ. ಮೆ. ರೈಟ್ಸ್ ಸಂಸ್ಥೆಯವರು ಸದರಿ ಒಡಂಬಡಿಕೆಯ ಅವಧಿಯನ್ನು 02 ವರ್ಷಗಳ ಅವಧಿಗೆ ಅಂದರೆ ದಿನಾಂಕ:20.01.2024 ರಿಂದ 19.01.2026 ರವರೆಗೆ (01 ವರ್ಷ ದೋಷಾಯುಕ್ತ ಹೊಣೆಗಾರಿಕಾ ಅವಧಿ ಸೇರಿದಂತೆ) ವಿಸ್ತರಿಸುವಂತೆ ಕೋರಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2023–24:ಸಾ.ಸಿ 05: ಇ.ವಿ–03 ದಿನಾಂಕ:07.06.2024 |
|---|---|

ವಿಷಯ: ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಪ್ರಯೋಗಾಲಯ ಕಟ್ಟಡಕ್ಕೆ ಎರಡನೇ ಮಹಡಿಯನ್ನು ನಿರ್ಮಿಸುವ ಕುರಿತು.

*****

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಆವರಣದಲ್ಲಿ ರೂಸಾ ಅನುದಾನದಲ್ಲಿ ನಿರ್ಮಿಸಿರುವ ಪ್ರಯೋಗಾಲಯ ಕಟ್ಟಡಕ್ಕೆ ಪ್ರಸ್ತುತ ಮೊದಲನೇ ಮಹಡಿಯನ್ನು ನಿರ್ಮಿಸುತ್ತಿದ್ದು, ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ. ಸದರಿ ಕಾಲೇಜಿಗೆ ತರಗತಿ ಕೊಠಡಿಗಳ ಅಭಾವವಿದ್ದು, ಸದರಿ ಪ್ರಯೋಗಾಲಯ ಕಟ್ಟಡಕ್ಕೆ ಎರಡನೇ ಮಹಡಿಯನ್ನು ನಿರ್ಮಿಸಿ ಮೇಲ್ಛಾವಣಿಗೆ ರೂಫ್ ಟ್ರಸ್ ಅಳವಡಿಸಿ ಸದರಿ ಜಾಗವನ್ನು ಮುಂದಿನ ದಿನಗಳಲ್ಲಿ ಜಿಮ್ ಅಥವಾ ಸಂಯುಕ್ತ ತರಗತಿಗಳ (Combined Classes) ಪಾಠ/ಪ್ರವಚನಗಳನ್ನು ನಡೆಸಬಹುದಾಗಿರುತ್ತದೆ. ಅಲ್ಲದೇ ಕಾಲೇಜಿಗೆ ಪ್ರತ್ಯೇಕವಾದ ಸೆಮಿನಾರ್ ಹಾಲ್ ಇಲ್ಲದಿರುವುದರಿಂದ ಕಾಲೇಜಿನ ವಿಚಾರ ಸಮ್ಮೇಳನ/ಕಾರ್ಯಗಾರ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೆಮಿನಾರ್ ಹಾಲ್ ರೀತಿಯಲ್ಲಿ ಬಹುಪಯೋಗಿ ಮಾದರಿಯಲ್ಲಿ ಉಪಯೋಗಿಸಿ ಕೊಳ್ಳಬಹುದಾಗಿರುತ್ತದೆ. ಸದರಿ ಕಟ್ಟಡಕ್ಕೆ ಎರಡನೇ ಮಹಡಿಯನ್ನು ನಿರ್ಮಿಸಿದಲ್ಲಿ ಮೊದಲನೇ ಮಹಡಿಗೆ ವಾಟರ್ ಪ್ರೂಫಿಂಗ್ ಮಾಡಿಸುವ ವೆಚ್ಚವು ಉಳಿತಾಯವಾಗಲಿದ್ದು ಆರ್ಥಿಕ ಮಿತವ್ಯಯವಾಗಲಿದೆ, ಸದರಿ ಕಾಮಗಾರಿಯನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ನಿರ್ವಹಿಸಬೇಕಿದ್ದು, ಎರಡನೇ ಮಹಡಿಯನ್ನು ಒಟ್ಟು 476.42 ಚ.ಮೀ ವಿಸ್ತೀರ್ಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದು, Light Roof structure ನ್ನು ನಿರ್ಮಿಸಿ ಅದನ್ನು ಜಿಮ್ನಾಷಿಯಂ ಹಾಲ್, ಕಚೇರಿ, ಶೌಚಾಲಯ ಮತ್ತು ಇತ್ಯಾದಿ ವ್ಯವಸ್ಥೆಗಳೊಂದಿಗೆ ನಿರ್ಮಿಸಲು ಈ ಬಗ್ಗೆ ಸ್ಥಳ ಪರಿಶೀಲನೆ ಅಗತ್ಯ ಅಳತೆಗಳನ್ನು ತೆಗೆದುಕೊಂಡು ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿರುತ್ತದೆ.

ಸದರಿ ಕೆಲಸವನ್ನು ನಿರ್ವಹಿಸಲು ಬೆಂಗಳೂರು ವೃತ್ತದ ಲೋಕೋಪಯೋಗಿ (ಸಿವಿಲ್) ಇಲಾಖೆಯ 2023–24 ನೇ ಸಾಲಿನ ದರಗಳಂತೆ ರೂ. 95.00 ಲಕ್ಷ (ರೂಪಾಯಿ ತೊಂಬತ್ತೈದು ಲಕ್ಷಗಳು ಮಾತ್ರ) ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದ್ದು, ಸದರಿ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳುವ ಸಂಬಂಧ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2023–24:ಸಾ.ಸಿ 05: ಇ.ವಿ–04 ದಿನಾಂಕ:07.06.2024 |
|---|---|

**ವಿಷಯ: ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ನಿರ್ಮಾಣವಾಗುತ್ತಿರುವ ಶೈಕ್ಷಣಿಕ ಭವನ–1 ಕ್ಕೆ ಲಿಫ್ಟ್ ವ್ಯವಸ್ಥೆಯನ್ನು ಕಲ್ಪಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ನಿರ್ಮಾಣವಾಗುತ್ತಿರುವ ಶೈಕ್ಷಣಿಕ ಭವನ–1 ಕಟ್ಟಡ ಕಾಮಗಾರಿಯು ಮುಕ್ತಾಯಗೊಂಡಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ತರಗತಿಗಳನ್ನು ಆರಂಭಿಸಲು ಯೋಜಿಸಲಾಗಿರುತ್ತದೆ. ಸದರಿ ಕಟ್ಟಡವು G+3 ಕಟ್ಟಡವಾಗಿದ್ದು, ವಿದ್ಯಾರ್ಥಿಗಳು, ಬೋಧಕರು, ಹಿರಿಯ ಪ್ರಾಧ್ಯಾಪಕರು, ಸಂದರ್ಶಕರು, ಹಿರಿಯ ನಾಗರೀಕರು & ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಕಟ್ಟಡದ ವಿವಿಧ ವಿಭಾಗಗಳಿಗೆ, ತರಗತಿ ಕೊಠಡಿಗಳಿಗೆ, ಸಭಾಂಗಣಕ್ಕೆ ತೆರಳಲು ಅನುಕೂಲವಾಗುವಂತೆ ಕಟ್ಟಡಕ್ಕೆ ಲಿಫ್ಟ್ ವ್ಯವಸ್ಥೆಯನ್ನು ಕಲ್ಪಿಸುವಂತೆ ಮಾನ್ಯ ಕುಲಪತಿಗಳ ಸೂಚನೆಯಂತೆ ಸ್ಥಳ ಪರಿಶೀಲನೆ ಮಾಡಿ, ಅದರಂತೆ ಅಗತ್ಯ ಅಳತೆಗಳನ್ನು ತೆಗೆದುಕೊಂಡು 2 ಸಂಖ್ಯೆಯ ಲಿಫ್ಟ್‌ಗಳನ್ನು ಅಳವಡಿಸಲು ರೂ. 77.00 (ರೂಪಾಯಿ ಎಪ್ಪತ್ತೇಳು ಲಕ್ಷ ಮಾತ್ರ) ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ನಿಯಮಾನುಸಾರ ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ಕೋರಿ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2023–24:ಸಾ.ಸಿ 05: ಇ.ವಿ–05 ದಿನಾಂಕ:07.06.2024 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ತಿಪಟೂರು ಸ್ನಾತಕೋತ್ತರ ಕೇಂದ್ರ ಕಲ್ಪಸಿರಿಯಲ್ಲಿ ಮುಖ್ಯದ್ವಾರ, ಭದ್ರತಾ ಕೊಠಡಿ ಹಾಗೂ ಇನ್ನಿತರೆ ಕಾಮಗಾರಿಯ ವರ್ಕ್ಸ್‌ಸ್ಲಿಪ್ ಅನುಮೋದನೆ ಕುರಿತು.**

*****

ತುಮಕೂರು ವಿಶ್ವವಿದ್ಯಾನಿಲಯದ ತಿಪಟೂರು ಸ್ನಾತಕೋತ್ತರ ಕೇಂದ್ರ ಕಲ್ಪಸಿರಿಯಲ್ಲಿ ರೂ. 61.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಮುಖ್ಯದ್ವಾರ, ಭದ್ರತಾ ಕೊಠಡಿ ಹಾಗೂ ಇನ್ನಿತರೆ ಕಾಮಗಾರಿಯ ಟೆಂಡರ್‌ನ್ನು ಯಶಸ್ವಿ ಬಿಡ್‌ದಾರರಾದ ಶ್ರೀ ಕೊಂಡಾ ಸುಬ್ಬಾ ರೆಡ್ಡಿ, ತುಮಕೂರು ರವರಿಗೆ ರೂ. 53,31,158–65 ಗಳ ಮೊತ್ತಕ್ಕೆ ದಿನಾಂಕ:03.12.2022 ರಂದು ಕಾರ್ಯಾದೇಶ ನೀಡಿ ಕಾಮಗಾರಿಯನ್ನು ನಿರ್ವಹಿಸಲಾಗಿತ್ತು. ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದು, ಇಲ್ಲಿಯವರೆಗೆ ರೂ. 44,05,272.61 ಗಳನ್ನು 3 ಚಾಲ್ತಿ ಬಿಲ್ಲುಗಳಲ್ಲಿ ಪಾವತಿಸಲಾಗಿರುತ್ತದೆ.

ಮುಂದುವರೆದು, ಕಾಮಗಾರಿಯನ್ನು ಗುತ್ತಿಗೆದಾರರು ನಿರ್ವಹಿಸುವಾಗ ಮಾನ್ಯ ಕುಲಪತಿಗಳು ಸ್ಥಳ ಭೇಟಿ ನೀಡಿ ಕೆಲವೊಂದು ಐಟಂಗಳನ್ನು ಹೆಚ್ಚುವರಿಯಾಗಿ ನಿರ್ವಹಿಸುವಂತೆ ಸೂಚನೆ ನೀಡಿರುತ್ತಾರೆ ಮತ್ತು ಕಾಮಗಾರಿ ಸ್ಥಳದ ವಿನ್ಯಾಸದಂತೆ ಹಾಗೂ ಅಗತ್ಯತೆಯ ಅನುಸಾರ ಕೆಲವೊಂದು ಐಟಂಗಳ ಪರಿಮಾಣಗಳು ಹೆಚ್ಚು/ಕಡಿಮೆಯಾಗಿರುತ್ತದೆ. ಪ್ರಸ್ತುತ ಕಾಮಗಾರಿ ಪೂರ್ಣಗೊಂಡಿದ್ದು, ಟೆಂಡರ್ ಐಟಂಗಳಿಗೆ ಹೆಚ್ಚುವರಿಯಾದ ಐಟಂಗಳನ್ನು ಉಳಿತಾಯವಾದ ಐಟಂಗಳಿಗೆ ಸರಿದೂಗಿಸಿದ್ದು, ಸದರಿ ಕಾಮಗಾರಿಗೆ ವರ್ಕ್ಸ್ಲಿಪ್‌ನ್ನು ಸಿದ್ಧಪಡಿಸಿದ್ದು, ಕಾಮಗಾರಿಯ ಒಟ್ಟು ಮೊತ್ತವು ರೂ. 59,72,060–00 ಗಳಾಗಿರುತ್ತದೆ. ಸದರಿ ಮೊತ್ತವು ಕಾಮಗಾರಿಯ ಅಂದಾಜು ಮೊತ್ತ ರೂ. 61,00,000–00 ಕ್ಕಿಂತ ಕಡಿಮೆಯಿರುತ್ತದೆ.

ಮೇಲ್ಕಂಡ ಕಾಮಗಾರಿಯ ವರ್ಕ್ಸ್‌ಸ್ಲಿಪ್ ನ್ನು ಅನುಮೋದನೆಗಾಗಿ ಸಲ್ಲಿಸುತ್ತಾ ಸದರಿ ಕಾಮಗಾರಿಗೆ ವರ್ಕ್ಸ್ಲಿಪ್‌ನಂತೆ ನಾಲ್ಕನೇ ಮತ್ತು ಅಂತಿಮ ಚಾಲ್ತಿ ಬಿಲ್ಲಿನ ಮೊತ್ತ ರೂ. 15,66,787–00 (ರೂಪಾಯಿ ಹದಿನೈದು ಲಕ್ಷದ ಅರವತ್ತಾರು ಸಾವಿರದ ಏಳು ನೂರ ಎಂಬತ್ತೇಳು ಮಾತ್ರ) ಗಳನ್ನು ಗುತ್ತಿಗೆದಾರರಾದ ಶ್ರೀ ಕೊಂಡಾ ಸುಬ್ಬಾ ರೆಡ್ಡಿ, ತುಮಕೂರು ರವರಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ಕೋರಿ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2023–24:ಸಾ.ಸಿ 05: ಇ.ವಿ–06 ದಿನಾಂಕ:07.06.2024 |
|---|---|

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಯ ವರ್ಕ್ಸ್‌ಸ್ಲಿಪ್ ಮತ್ತು E.I.R.L ಅನುಮೋದನೆ ಕುರಿತು.

*****

ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಯ ರೂ. 67.75 ಲಕ್ಷಗಳ ಅಂದಾಜು ಮೊತ್ತದ ಟೆಂಡರ್‌ನ ಯಶಸ್ವಿ ಬಿಡ್‌ದಾರರಾದ ಶ್ರೀ ಕೊಂಡಾ ಸುಬ್ಬಾ ರೆಡ್ಡಿ, ತುಮಕೂರು ರವರಿಗೆ ರೂ. 52,63,225–00 ಗಳ ಬಿಡ್ ಮೊತ್ತಕ್ಕೆ ದಿನಾಂಕ:16.11.2023 ರಂದು ಕಾರ್ಯಾದೇಶ ನೀಡಿ ಕಾಮಗಾರಿಯನ್ನು ನಿರ್ವಹಿಸಲಾಗಿತ್ತು. ಇಲ್ಲಿಯವರೆಗೆ ಈಗಾಗಲೇ ಒಂದನೇ ಚಾಲ್ತಿ ಬಿಲ್ಲಿನಲ್ಲಿ ರೂ. 50,53,469/– ಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿರುತ್ತದೆ.

ಮುಂದುವರೆದು, ಒಟ್ಟಾರೆ ಕಾಮಗಾರಿಯು ಹೆಚ್ಚಳ ಮತ್ತು ಉಳಿತಾಯದ ಅಂಶಗಳಲ್ಲಿ ಸರಿದೂಗಿಸಿದಂತೆ ಸದರಿ ಕಾಮಗಾರಿಗೆ ವರ್ಕ್ಸ್‌ಸ್ಲಿಪ್ ಮತ್ತು E.I.R.L ಸಿದ್ಧಪಡಿಸಿದ್ದು ಒಟ್ಟು ಕಾಮಗಾರಿ ವೆಚ್ಚವು ರೂ. 67,20,356–00 ಗಳಾಗಿರುತ್ತದೆ. ಸದರಿ ಮೊತ್ತವು ಕಾಮಗಾರಿಯ ಮೂಲ ಅಂದಾಜು ಮೊತ್ತ ರೂ. 67,75,000/– ಗಳಿಗಿಂತ ಕಡಿಮೆಯಿದ್ದು ಯಾವುದೇ ಹೆಚ್ಚಳವಾಗಿರುವುದಿಲ್ಲ.

ಮೇಲ್ಕಂಡ ಕಾಮಗಾರಿಯ ವರ್ಕ್ಸ್‌ಸ್ಲಿಪ್ ಮತ್ತು E.I.R.L ನ್ನು ಅನುಮೋದನೆಗಾಗಿ ಸಲ್ಲಿಸುತ್ತಾ ಸದರಿ ಕಾಮಗಾರಿಯ ಎರಡನೇ ಮತ್ತು ಅಂತಿಮ ಚಾಲ್ತಿ ಬಿಲ್ಲಿನ ಮೊತ್ತ ರೂ. 16,66,887–00 (ರೂಪಾಯಿ ಹದಿನಾರು ಲಕ್ಷದ ಅರವತ್ತಾರು ಸಾವಿರದ ಎಂಟು ನೂರ ಎಂಬತ್ತೇಳು ಮಾತ್ರ) ಗಳನ್ನು ಗುತ್ತಿಗೆದಾರರಾದ ಶ್ರೀ ಕೊಂಡಾ ಸುಬ್ಬಾ ರೆಡ್ಡಿ, ತುಮಕೂರು ರವರಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ಕೋರಿ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023–24:ಸಾ.ಸಿಂ:05 :ಶೈವಿ:01 ದಿನಾಂಕ:07.06.2024 |
|---|---|

**ವಿಷಯ :ತುಮಕೂರು ವಿಶ್ವವಿದ್ಯಾನಿಲಯ ಹಾಗೂ JD Institute of Fashion Technology, Bangalore, ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯ ಹಾಗೂ JD Institute of Fashion Technology, Bangalore, ಇವರ ಸಹಯೊಗದೊಂದಿಗೆ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಪ್ರಾರಂಭಿಸುವ Bachelor of Design ಪ್ರೋಗ್ರಾಂ ಸಂಬಂಧ JD Institute of Fashion Technology, Bangalore ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಸಂಬಂಧ ಕರಡು ಒಡಂಬಡಿಕೆಯನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕೋರಿ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ವಿಷಯ ಸಂಖ್ಯೆ : | 2024–25:ಸಾ.ಸಿಂ–05 : ಕ್ರೀ.ವಿ–01 ದಿನಾಂಕ:07.06.2024 |
|---|---|

ವಿಷಯ:– ದಿನಾಂಕ:17.05.2024 ರಂದು ನಡೆದ ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ 2024–25ನೇ ಶೈಕ್ಷಣಿಕ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು

ಉಲ್ಲೇಖ :– ಸಂಖ್ಯೆ:ತುವಿ:ವಿ.ವಿ.ಪ/ಸಿಂ.ವಿ:ಸುತ್ತೋಲೆ:2023–24/327 ದಿನಾಂಕ:18.05.2024

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ 2024–25ನೇ ಶೈಕ್ಷಣಿಕ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭೆಯನ್ನು ದಿನಾಂಕ:17.05.2024 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಅನುಷ್ಠಾನಗೊಳಿಸುವ ಸಂಬಂಧ, ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಲು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023-24/ಸಾ.ಸಿಂ-05:ಸಿಬ್ಬಂದಿ-01: ದಿನಾಂಕ:-07.06.2024 |
|---|---|

**ವಿಷಯ: ವಿಶ್ವವಿದ್ಯಾನಿಲಯದ ಆಡಳಿತ ಕಚೇರಿ/ಸ್ನಾತಕೋತ್ತರ ಅಧ್ಯಯನ ವಿಭಾಗ/ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಸಂಚಿತವೇತನ ನೌಕರರ ಸೇವೆಯನ್ನು ಮುಂದಿವರಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.**

*****

ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಸಹಾಯಕರಾಗಿ/ಹೊರಗುತ್ತಿಗೆಯಡಿ ಕರ್ತವ್ಯ ನಿರ್ವಹಿಸುತ್ತಿದ್ದ 06 (ಶ್ರೀಮತಿ ಪದ್ಮಾವತಿ ಟಿ.ಎನ್, ಶ್ರೀ ನರಸಿಂಹಮೂರ್ತಿ ಎಂ.ಎನ್, ಶ್ರೀ ನರಸಿಂಹಮೂರ್ತಿ, ಶ್ರೀ ಗೋವಿಂದರಾಯ ಎನ್, ಶ್ರೀ ನಾಗರಾಜು ಆರ್, ಮತ್ತು ಶ್ರೀ ದಯಾನಂದ ಸ್ವಾಮಿ ಹೆಚ್, ಎಸ್,) ಸಿಬ್ಬಂದಿಗಳನ್ನು ಸರ್ಕಾರದಿಂದ ಮಂಜೂರಾದ ಗ್ರೂಪ್ ಸಿ, ಮತ್ತು ಡಿ, ಹುದ್ದೆಗಳಿಗೆದುರಾಗಿ ಹಂಗಾಮಿ ಸಂಚಿತ ವೇತನದಡಿಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಕಚೇರಿ/ಸ್ನಾತಕೋತ್ತರ ಅಧ್ಯಯನ ವಿಭಾಗ/ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುವಂತೆ ದಿನಾಂಕ:04.05.2023 ರಿಂದ ಪೂರ್ವಾನ್ವಯವಾಗುವಂತೆ ಮುಂದಿನ ಹನ್ನೊಂದು ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ಇವೆರಡರಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ನೇಮಕಾತಿಮಾಡಿ ದಿನಾಂಕ: 24.05.2023 ರಂದು ಆದೇಶಿಸಲಾಗಿತ್ತು.

ಪ್ರಸ್ತುತ 06 ಹಂಗಾಮಿ ಸಂಚಿತ ವೇತನ ನೌಕರರ ಹನ್ನೊಂದು ತಿಂಗಳ ಸೇವಾ ಅವಧಿಯು 03.04.2024 ರಂದು ಕೊನೆಗೊಂಡಿದ್ದು, ಸದರಿ ನೌಕರರನ್ನು ದಿನಾಂಕ:03.04.2024 ರಿಂದ ಅನ್ವಯವಾಗುವಂತೆ ಬಿಡುಗಡೆಗೊಳಿಸಿ ದಿ: 19.04.2024 ರಂದು ಆದೇಶಿಸಲಾಗಿರುತ್ತದೆ.

ಮುಂದುವರೆದು, ಸದರಿ ಸಂಚಿತ ವೇತನ ನೌಕರರ ಸೇವೆಯನ್ನು ಮುಂದುವರೆಸುವ ಸಂಬಂಧ ದಿನಾಂಕ:11.01.2023 ರ ವಿಶ್ವವಿದ್ಯಾನಿಲಯದ ಸುತ್ತೋಲೆಯನ್ವಯ ಕಾರ್ಯನಿರ್ವಹಣಾ ವರದಿಗಳು ಸ್ವೀಕೃತವಾಗಿದ್ದು, ಸದರಿ ಕಾರ್ಯನಿರ್ವಹಣಾವರದಿಯಲ್ಲಿ 06 ನೌಕರರ ಸೇವೆಯು ತೃಪ್ತಿಕರವಾಗಿರುವ ಬಗ್ಗೆ ಸಂಬಂಧಪಟ್ಟ ವಿಭಾಗದ ಮೇಲಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಸಂಚಿತವೇತನ ನೌಕರರ ಸೇವೆಯನ್ನು ದಿನಾಂಕ:04.05.2024 ರಂದು ಒಂದು ದಿನ ಭಂಗಗೊಳಿಸಿ **ದಿನಾಂಕ:05.04.2024 ರಿಂದ ಪೂರ್ವಾನ್ವಯವಾಗುವಂತೆ** ಮುಂದಿನ ಹನ್ನೊಂದು ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ಇವೆರಡರಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾನ್ಯ ಕುಲಪತಿಗಳ ಆದೇಶದಂತೆ ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೊಳಪಟ್ಟು **ಅಧಿಕೃತ ಜ್ಞಾಪನ ಸಂಖ್ಯೆ:ತುವಿ:ಸಿಬ್ಬಂದಿ-2793:2024-25/156 ದಿನಾಂಕ:24.04.2024** ರಲ್ಲಿ ಮುಂದುವರೆಸಿ ಆದೇಶಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023-24/ಸಾಮಾನ್ಯ-05/ಸಿಬ್ಬಂದಿ-02,ದಿನಾಂಕ:07.06.2024 |
|---|---|

ವಿಷಯ: ಡಾ.ಮುಕುಂದಪ್ಪ ಬಿ.ಎಲ್, ಸಹ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಹಾಗೂ ವಯೋನಿವೃತ್ತಿ ಗಳಿಕೆ ರಜೆ ನಗದೀಕರಣ ಸೌಲಭ್ಯ ಮಂಜೂರು ಮಾಡಿರುವ ಆದೇಶಗಳನ್ನು ಸ್ಥಿರೀಕರಣ ಕುರಿತು.

ಉಲ್ಲೇಖ: 1. ವಿ.ವಿ.ಬಿಡುಗಡೆ ಆದೇಶ ಸಂಖ್ಯೆ:ತುವಿ:ಸಿಬ್ಬಂದಿ-299:2024-25/168, ದಿನಾಂಕ:30.04.2024.
2. ವಿ.ವಿ.ಕಚೇರಿ ಆದೇಶ ಸಂಖ್ಯೆ:ತುವಿ:ಸಿಬ್ಬಂದಿ-299:2024-25/169, ದಿನಾಂಕ:30.04.2024.
3. ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ:13001/2020.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ.ಮುಕುಂದಪ್ಪ ಬಿ.ಎಲ್., ಸಹ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ ಇವರು ಕಾಲೇಜು ಶಿಕ್ಷಣ ಇಲಾಖೆಯಿಂದ ವಿಶ್ವವಿದ್ಯಾನಿಲಯದ ಸೇವೆಯಲ್ಲಿ ದಿನಾಂಕ:21.01.2010ರಂದು ವಿಲೀನಗೊಂಡು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸಿ, 62 ವರ್ಷಗಳ ವಯೋಮಿತಿ ಪೂರೈಸಿದ್ದ ಹಿನ್ನಲೆಯಲ್ಲಿ ಸದರಿಯವರನ್ನು ಉಲ್ಲೇಖ(1)ರ ವಿಶ್ವವಿದ್ಯಾನಿಲಯ ಬಿಡುಗಡೆ ಆದೇಶ ಸಂಖ್ಯೆ:ತುವಿ:ಸಿಬ್ಬಂದಿ-299:2024-25/168, ದಿನಾಂಕ:30.04.2024ರಂದು ರಲ್ಲಿ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ.

ಸದರಿಯವರು ದಿನಾಂಕ:01.04.2006ಕ್ಕಿಂತ ಮೊದಲೇ 1986 ರಿಂದ 2002 ರ ಅವಧಿಯಲ್ಲಿ ಸರ್ಕಾರಿ ಸೇವೆಗೆ ಸೇರಿದವರಾಗಿದ್ದು ಹಳೆ ಪಿಂಚಣಿ ಯೋಜನೆ ಹಾಗೂ ಇತರೆ ನಿವೃತ್ತಿ ಸೇವಾ ಸೌಲಭ್ಯಗಳನ್ನು ನೀಡಲು ಸರ್ಕಾರ ಮತ್ತು ವಿಶ್ವವಿದ್ಯಾನಿಲಯಕ್ಕೆ ಕೋರಿಕೆ ಸಲ್ಲಿಸಿದ್ದು, ಈ ಸಂಬಂಧ ಯಾವುದೇ ಅಂತಿಮ ಆದೇಶ ಸರ್ಕಾರದಿಂದಾಗಲೀ ಮತ್ತು ವಿಶ್ವವಿದ್ಯಾನಿಲಯದಿಂದ ಆಗದಿರುವುದರಿಂದ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು (ರಿಟ್ ಪಿಟಿಷನ್ ಸಂಖ್ಯೆ:13001/2020) ತತ್ಸಂಬಂಧವಾಗಿ ಕರ್ನಾಟಕ ಉಚ್ಛ ನ್ಯಾಯಾಲಯವು ದಾವೆ ಹೂಡಲಾದ 18 ನೌಕರರನ್ನು ಹಳೇ ಪಿಂಚಣಿ ಯೋಜನೆಯಡಿಯಲ್ಲಿ ಬರುವ ನೌಕರರೆಂದು ಪರಿಗಣಿಸಲು ತೀರ್ಪು ನೀಡಿರುತ್ತದೆ. ಆದರೆ ಈ ಸಂಬಂಧ ಇಲ್ಲಿಯವರೆಗೂ ಸರ್ಕಾರದಿಂದ ಯಾವುದೇ ನಿರ್ದೇಶನ ಸ್ವೀಕೃತಗೊಂಡಿರುವುದಿಲ್ಲ.

ದಿನಾಂಕ:30.04.2024ಕ್ಕೆ ಸದರಿಯವರ ಸೇವಾಪುಸ್ತಕದಲ್ಲಿ ಲಭ್ಯವಿರುವಂತೆ 165 ದಿನಗಳ ಗಳಿಕೆ ರಜೆ ನಗದೀಕರಣ ಹಾಗೂ ಡಾ.ಮುಕುಂದಪ್ಪ ಬಿ.ಎಲ್., ಇವರ ಮನವಿ ಮೇರೆಗೆ ದಿನಾಂಕ:01.03.2011 ರಿಂದ 06.06.2012 ರವರೆಗೆ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಒಟ್ಟು 25 ದಿನಗಳ ಗಳಿಕೆ ರಜೆ (01 ವರ್ಷಕ್ಕೆ ಗರಿಷ್ಠ 20 ಗಳಿಕೆ ರಜೆಯಂತೆ)ಖಾತೆಗೆ ಸೇರ್ಪಡಿಸಬೇಕಾಗಿದ್ದು, ಒಟ್ಟು 185 ದಿನಗಳಿಗೆ ಉಲ್ಲೇಖ(2)ರ ವಿಶ್ವವಿದ್ಯಾನಿಲಯ ಕಚೇರಿ ಆದೇಶ ಸಂಖ್ಯೆ:ತುವಿ:ಸಿಬ್ಬಂದಿ-299:2024-25/169, ದಿನಾಂಕ:30.04.2024 ರಲ್ಲಿ ವಯೋನಿವೃತ್ತಿ ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ಮಂಜೂರಾತಿಗಾಗಿ ಆದೇಶ ನೀಡಲಾಗಿರುತ್ತದೆ.

ಡಾ.ಮುಕುಂದಪ್ಪ ಬಿ.ಎಲ್., ಸಹ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಹಾಗೂ ವಯೋನಿವೃತ್ತಿ ಹೊಂದುವ ಸಮಯದಲ್ಲಿ ಸೇವಾ ಪುಸ್ತಕದಲ್ಲಿ ಲಭ್ಯವಿದ್ದ ಗಳಿಕೆ ರಜೆ ಹಾಗೂ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ ಅವಧಿಯ ಗಳಿಕೆ ರಜೆ ಸೇರಿ ಒಟ್ಟು 185 ದಿನಗಳಿಗೆ ವಯೋನಿವೃತ್ತಿ ಗಳಿಕೆ ರಜೆ ನಗದೀಕರಣ ಸೌಲಭ್ಯ ಮಂಜೂರಾತಿ ನೀಡಿರುವ ಆದೇಶಗಳನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.